## ಅಧ್ಯಾಯ 5

# ತಾಳ್ಮೆ ಮತ್ತು ಅನೈತಿಕತೆ

1 ಕೊರಿಂಥದವರಿಗೆ ಪತ್ರಿಕೆಯ ಮೊದಲಿನ ನಾಲ್ಕು ಅಧ್ಯಾಯಗಳು ಸಭೆಯಲ್ಲಿರುವ ಪಕ್ಷಪಂಗಡಗಳ ಕುರಿತು ಪೌಲನ ಕಳಕಳಿಯ ಕುರಿತು ಒಟ್ಟಾಗಿ ಕಟ್ಟಲ್ಪಟ್ಟಿವೆ. ಕೊರಿಂಥದಲ್ಲಿರುವ ಕೆಲವು ಸಹೋದರರ ಮೊಂಡತನ (4:19) ಈ ಪಂಗಡಗಳತ್ತ ನಡೆದಿದೆ. ಈ ಐಕ್ಯತೆಯ ಕುರಿತು ಚರ್ಚಿಸಿದ ಮೇಲೆ, ಅಪೊಸ್ತಲನು ಇನ್ನೊಂದು ಸಮಸ್ಯೆಯ ಕಡೆಗೆ ಹೋಗುತ್ತಾನೆ. ಈ ಕ್ರೈಸ್ತರು ಪೌಲನ ಅಧಿಕಾರಕ್ಕೆ ಮೊಂಡುತನದಿಂದ ಸವಾಲನ್ನು ನೀಡಿದರು (ನೋಡಿರಿ 4:18). ಪೌಲನು ಈ ಸಮಸ್ಯೆಯೊಂದಿಗೆ ವ್ಯವಹರಿಸಬೇಕಾಗಿತ್ತು ಮತ್ತು ಅವನು ಹಾಗೆ ಮಾಡಿದನು.

ಹಾಗೂ, ಕೊರಿಂಥದಲ್ಲಿರುವ ಕೆಲವರನ್ನು ಪೌಲನ ಅಪೊಸ್ತಲಿಕ ಅಧಿಕಾರಕ್ಕೆ ಸವಾಲನ್ನು ನೀಡಿದ ಅದೇ ಅಹಂಕಾರ ಕ್ರಿಸ್ತನ ದೇಹದ ಗುಣಲಕ್ಷಣಗಳನ್ನು ತಿಳಿಸುವ ಪರಿಶುದ್ಧತೆಯನ್ನು ಅಲಕ್ಷಿಸಿಸಲು ಕಾರಣವಾಯಿತು. ಅದೇ ಸಮಯದಲ್ಲಿ ದೈವ-ಕೇಂದ್ರಿಕೃತ ನೈತಿಕ ವ್ಯವಸ್ಥೆ ಯಾವಾಗಲೂ ದೇವರ ಸೇವೆಯನ್ನು ಮಾಡಲು ತಳಹದಿಯಾಗಿತ್ತು, ಅಪೊಸ್ತಲರು ಕೊರಿಂಥದವರೊಂದಿಗೆ ನೈತಿಕತೆಯ ಕುರಿತು ಚರ್ಚೆಯಲ್ಲಿ ತೊಡಗಿದ್ದರು ಎಂಬುದಕ್ಕೆ ಯಾವುದೇ ದಾಖಲೆಯಿಲ್ಲ. ಅಲ್ಲದೇ, ಈಗ ಗಂಭೀರವಾದ ಸಮಸ್ಯೆ ಅಪೊಸ್ತಲರ ಗಮನಕ್ಕೆ ಬಂದಿದೆ. ಸಭೆಯೊಂದಿಗೆ ಗುರುತಿಸಿಕೊಂಡ ಒಬ್ಬ ಮನುಷ್ಯನು, ಕೊರಿಂಥದ ಕ್ರೈಸ್ತರು ಸಂಪೂರ್ಣ ಅನ್ಯೋನ್ಯತೆಯನ್ನು ಹಂಚಿಕೊಂಡವನು ತಂದೆಯ ಪತ್ನಿಯೊಂದಿಗೆ, ಅಸಭ್ಯವಾದ ಅನೈತಿಕ ಸಂಬಂಧದಲ್ಲಿ ಜೀವಿಸುತ್ತಿದ್ದನು. ಪೌಲನು ಈ ವರದಿಯಿಂದ ಸ್ಪಷ್ಟವಾದ ಆಶ್ಚರ್ಯಕ್ಕೆ ಒಳಗಾದನು.

ಮನುಷ್ಯನ ನಡತೆಯು ಕ್ಷಮಿಸಲಶಕ್ಯವಾಗಿತ್ತು ಮತ್ತು ಪೌಲನು ಇಂಥಹ ಪಾಪವನ್ನು ಯಾವುದೇ ರೀತಿಯಲ್ಲಿ ತೀವ್ರವಾದ ವೇದನೆಯಿಲ್ಲದೆ ಸಭೆಯು ಸಹಿಸಿಕೊಳ್ಳುತ್ತಿರುವದನ್ನು ವಿವರಿಸಲು ಅಸಾಧ್ಯ ಎಂಬುದನ್ನು ಕಂಡುಕೊಂಡನು. ಸಂಪೂರ್ಣವಾಗಿ ಸಭೆ ಈ ವಿಷಯದಲ್ಲಿ ವಿಫಲವಾಗಿತ್ತು.

## ಪಾಪದ ಶುದ್ಧೀಕರಣ (5:1-5)

**1ನಿಮ್ಮಲ್ಲಿ ಜಾರತ್ವವುಂಟೆಂದು ಜನರು ಸಾಧಾರಣವಾಗಿ ಹೇಳುತ್ತಾರೆ. ಒಬ್ಬನು ತನ್ನ ಅಪ್ಪನ ಹೆಂಡತಿಯನ್ನು ಇಟ್ಟುಕೊಂಡಿದ್ದಾನಂತೆ; ಅಂಥ ಜಾರತ್ವವು ಅನ್ಯಜನರಲ್ಲಿಯೂ ಇಲ್ಲ. 2ಹೀಗಿದ್ದರೂ ನೀವು ದುಃಖವನ್ನು ತೋರಿಸುವ ಈ ಕಾರ್ಯಮಾಡಿದವರನ್ನು ನಿಮ್ಮೊಳಗಿಂದ ಬಹಿಷ್ಕರಿಸದೆ ಉಬ್ಬಿಕೊಂಡೇ ಇದ್ದೀರಲ್ಲಾ. 3ನಾನಂತೂ ದೇಹದಿಂದ ದೂರವಾಗಿದ್ದರೂ**

**ಆತ್ಮದಿಂದ ಹತ್ತಿರದಲ್ಲಿದ್ದು. ಈ ಕಾರ್ಯಮಾಡಿದವರನ್ನು ಕುರಿತು ಆಗಲೇ ಹತ್ತರವಿದ್ದವನಂತೆ ತೀರ್ಪುಮಾಡಿದ್ದೇನಂದರೆ - [4]ನೀವೂ ನನ್ನಾತ್ಮನೂ ಕರ್ತನಾದ ಯೇಸುವಿನ ಸಾಮರ್ಥ್ಯ ಸಹಿತ ಒಟ್ಟುಗೂಡಿ ಬಂದಿರಲಾಗಿ [5]ಕರ್ತನಾದ ಯೇಸುವಿನ ಪ್ರತ್ಯಕ್ಷತೆಯ ದಿನದಲ್ಲಿ ಅಂಥವನ ಆತ್ಮವು ರಕ್ಷಣೆ ಹೊಂದುವದಕ್ಕಾಗಿ ಅವನ ಶರೀರಭಾವವು ನಾಶವಾಗಬೇಕೆಂದು ನಮ್ಮ ಕರ್ತನಾದ ಯೇಸುವಿನ ಹೆಸರಿನಲ್ಲಿ ಅವನನ್ನು ಸೈತಾನನಿಗೆ ಒಪ್ಪಿಸಿಕೊಡಬೇಕೆಂಬದೇ.**

**ವಚನ 1.** ಪೌಲನು ಈ ಪಾಪದ ವಿಷಯದಲ್ಲಿ ಸಾಮಾನ್ಯ ಚರ್ಚೆಯಲ್ಲಿ ಪ್ರವೇಶಿಸಲು ಸಿದ್ಧನಾಗಿರಲಿಲ್ಲ. ತನ್ನ ಓದುಗರಿಗೆ ವಿಷಯದ ಕುರಿತಾದ ಆತನ ಪ್ರಸ್ತಾವನೆ ಗುಡುಗಿನಂತೆ ಅವನು ಪ್ರಾರಂಭಿಸಿದನು ಎಂದು **ಸಾಧಾರಣವಾಗಿ ಹೇಳುತ್ತಾರೆ**. ರಕ್ಷಕನು ಮತ್ತು ವಿಮೋಚಕನು ಆದ ಯೇಸು ಕ್ರಿಸ್ತನ ಹೆಸರನ್ನು ಹೊದ್ದುಕೊಂಡಿರುವ ಜನರು ವಿಗ್ರಹಾರಾಧಕರು ಕೂಡಾ ಮುಖ ಕೆಂಪಗೆ ಮಾಡಿಕೊಳ್ಳುವಂತೆ **ಜಾರತ್ವವುಂಟೆಂದು** ತಮ್ಮ ಸಾರ್ವಜನಿಕ ಒಪ್ಪಿಗೆಯನ್ನು ನೀಡುತ್ತಿದ್ದರು. ಪೌಲನು ಪುರುಷ, ಸ್ತ್ರೀ ಅಥವಾ ದಂಪತಿಗಳಿಗೆ ಸಂಬೋಧಿಸಲಿಲ್ಲ. ಅವನ ನಿರಾಶೆ ಸಭೆಯೊಂದಿಗೆ ಇತ್ತು. ಅದು ಜ್ಞಾನ ಮತ್ತು ಜಾಣತನದ ವಾದವಿವಾದಗಳ ಸೋಗನ್ನು ಹಾಕುತಿತ್ತು, ಕೊರಿಂಥದ ಕ್ರೈಸ್ತರು ಈಂಥಹ ನಾಚಿಗ್ಗೇಡಿನ ವರ್ತನೆಯನ್ನು ಸಹಿಸಿಕೊಳ್ಳಲು ಸಿದ್ಧರಾಗಿರುವದರ ಮೂಲಕ ಕ್ರಿಸ್ತನ ಕುರಿತು ಎಷ್ಟು ಕಡಿಮೆ ತಿಳಿದಿದ್ದೇವೆ ಎಂಬುದನ್ನು ಪ್ರದರ್ಶಿಸುತ್ತಿದ್ದರು.

ಅಪೊಸ್ತಲರ ನ್ಯಾಯತೀರ್ಪು ಪಾಪದಲ್ಲಿರುವ ಮನುಷ್ಯನ ಜೀವಿತದ ಮೇಲೆ ಮತ್ತು ಅದನ್ನು ಸಹಿಸಿಕೊಳ್ಳುತ್ತಿರುವ ಸಭೆಯ ಮೇಲೆ ಕೇಂದ್ರಿಕರಿಸಲಾಗಿತ್ತು; ಅವನಿಗೆ ಸ್ತ್ರೀಯ ಕುರಿತು ಪ್ರಾಯೋಗಿಕವಾಗಿ ಹೇಳಲಿಕ್ಕೆ ಏನೂ ಇರಲಿಲ್ಲ. ಬಹುಶಃ ಅವಳು ಇಂಥಹ ಪರಿಸ್ಥಿತಿಗೆ ಒತ್ತಾಯವನ್ನು ಹೊಂದಿರಬಹುದು, ಅಥವಾ ಅವಳು ಅವಿಶ್ವಾಸಿಯಾಗಿರಬಹುದು. ಪುರುಷನು, ಹಾಗೂ, ಅಂಥ ಜಾರತ್ವವು ಅನ್ಯಜನರಲ್ಲಿಯೂ ಇಲ್ಲ. ಇಂಥಹ ಪಾಪದಲ್ಲಿ ಜೀವಿಸುತ್ತಿರುವ ಕ್ರೈಸ್ತನಾಗಿದ್ದನು. ತನ್ನ ಪ್ರಥಮ ಕಳಕಳಿಯನ್ನು ವ್ಯಕ್ತಪಡಿಸುತ್ತಾ, ಪೌಲನು, ತಮ್ಮ ತಲೆಯನ್ನು ತಿರುಗಿಸುತ್ತಾ ಮತ್ತು ಈ ಪಾಪದೊಂದಿಗೆ ವ್ಯವಹರಿಸದೇ ಇರುವ ಸಭೆಯ ಸದಸ್ಯರೆಡೆಗೆ ಈ ಮಾತುಗಳನ್ನು ನಿರ್ದೇಶಿಸುತ್ತಾನೆ.

ಮೋಶೆಯ ಧರ್ಮಶಾಸ್ತ್ರವು ವ್ಯಾಖ್ಯಾನಿಸಿದ ಹಾದರದ ಕುರಿತು ಎಚ್ಚರಿಕೆಯನ್ನು ನೀಡುತ್ತಾನೆ (ಯಾಜಕಕಾಂಡ 18:8; 20:11; ಧರ್ಮೋಪದೇಶಕಾಂಡ 22:30; 27:20). ಕೆಲವೊಮ್ಮೆ ಗ್ರೀಕ್ ಸಮಾಜ ಹಾದರದೊಂದಿಗೆ ಆಕರ್ಷಣೆಯನ್ನು ಪ್ರದರ್ಶಿಸುತ್ತದೆ ಆದರೆ ಸಾಮಾನ್ಯವಾಗಿ ಇದನ್ನು ಹೀನೈಸುವಂತೆ ದೃಷ್ಟಿಸುತ್ತಾನೆ. ಗ್ರೀಕ್ ಸಂಸ್ಕøತಿಯಲ್ಲಿ ಹಾದರಕ್ಕೆ ಇರುವ ಸಾಮಾನ್ಯ ಸ್ವೀಕೃತಿಗೆ ಅಸ್ತಿವಾರವಿಲ್ಲ. ಹಾಗೂ, ವಿಗ್ರಹಾರಾಧಕರ ನೈತಿಕತೆಯ ಮಧ್ಯದಲ್ಲಿ ಅಲಕ್ಷತನದ ಆಳತೆಯಲ್ಲಿ, ಸಭೆ ತನ್ನ ತಂದೆಯ ಹೆಂಡತಿಯೊಂದಿಗೆ ಈ ಮನುಷ್ಯನ ಸಂಬಂಧವನ್ನು ಸಹಿಸಿಕೊಳ್ಳುವಾಗ ತನ್ನ ಉತ್ತಮವಾದ ಹೆಸರನ್ನು ಮಲಿನಗೊಳಿಸುತ್ತದೆ.

ಬಹುಶಃ ಪೌಲನು ಖ್ಲೋಯೆಯ ಜನರಿಂದ ಕೊರಿಂಥದಲ್ಲಿರುವ ಕ್ರೈಸ್ತ ಪುರುಷರು ತಮ್ಮ ತಂದೆಯ ಹೆಂಡತಿಯೊಂದಿಗೆ ಸಂಬಂಧ ಹೊಂದಿದ್ದಾರೆ ಎಂಬ ವರದಿಯನ್ನು ಆಲಿಸಿರಬಹುದು (1:11) ಅಥವಾ ಬಹುಶಃ 16:17ರಲ್ಲಿ ಹೆಸರಿಸಲ್ಪಟ್ಟ ನಿಯೋಜಕರಿಂದ ಆಲಿಸಿರಬಹುದು. ಪೌಲನ ಪ್ರತಿಕ್ರಿಯೆಯಲ್ಲಿರುವ ಪದಗಳು ಅವನ ಅಪನಂಬಿಕೆ ಮತ್ತು

ನಿರಾಶೆಯನ್ನು ತೋರಿಸುತ್ತದೆ. ಅವನು "ನಾನು ಹೇಗೆ ನಿಮ್ಮೊಂದಿಗೆ ವ್ಯವಹರಿಸಬೇಕು, ಅವರು ಇಂಥಹ ಅಸಭ್ಯ ಅನೈತಿಕತೆಯನ್ನು ಬಿಟ್ಟುಬಿಟ್ಟಿದ್ದಾರೆ ಎಂದು ನಾನು ನಂಬುವದಿಲ್ಲ" ಎಂದು ಬರೆಯುತ್ತಿರುವ ಹಾಗೆ ಒಬ್ಬನು ಅವನ ತಲೆಯಲ್ಲಿ ಸುತ್ತುತಿರುವ ವಿಚಾರಗಳನ್ನು ಹೀಗೆ ಕಲ್ಪಿಸಿಕೊಳ್ಳಬಹುದು. ಅಪೊಸ್ತಲನು ತಾನು ಅವರ ಬಳಿಗೆ "ಬೆತ್ತತೆಗೆದುಕೊಂಡು" ಬರಬೇಕಾಗಿತ್ತೋ? ಎಂಬ ಕಳಕಳಿಯನ್ನು ವ್ಯಕ್ತಪಡಿಸುತ್ತಾನೆ (4:21). ಇದರ ಪರಿಣಾಮವಾಗಿ ಆತನು ಹೀಗೆ ಹೇಳುತ್ತಾನೆ, "ನಾನು ಇಂಥಹ ಗಂಭೀರವಾದ ಭಾಷೆಯನ್ನು ಏಕೆ ಉಪಯೋಗಿಸಿದ್ದೇನೆ ಯಾಕೆ ನಾನು ಬೆತ್ತದೊಂದಿಗೆ ಬರಬೇಕೆಂದು ಪರಿಗಣಿಸಿದ್ದೇನೆ ಎಂದು ನೀವು ಆಶ್ಚರ್ಯಗೊಳ್ಳಬಹುದು? ನಿಮ್ಮಲ್ಲಿ ನಡೆಯುತ್ತಿರುವ ಕೆಲವು ವರದಿಗಳ ಕುರಿತು ನಿಮಗೆ ಹೇಳುತ್ತೇನೆ. ಕ್ರಿಸ್ತನ ದೇಹವು ಅನ್ಯತಿಕತೆಯಿಂದಾಗಿ ಮಲಿನವಾಗಿದೆ - ಮತ್ತು ಇದಕ್ಕೂ ಕನಿಷ್ಠವಾಗಿ ನೀವು ಅದನ್ನು ಹಗುರವಾಗಿ ತೆಗೆದುಕೊಳ್ಳುತ್ತೀರಿ!"

ನಿಖರವಾಗಿ ಅಪೊಸ್ತಲನು ಯಾಕೆ ತನ್ನ ತಂದೆಯ ಹೆಂಡತಿ ಎಂದು ಹೇಳಿದ್ದಾನೋ ಅದು ಖಚಿತವಾಗಿಲ್ಲ. ಒಂದುವೇಳೆ ಅವಳು ಮನುಷ್ಯನ ದೈಹೀಕ ತಾಯಿಯಾಗಿದ್ದಲ್ಲಿ, ಅಪೊಸ್ತಲನು ಖಂಡಿತವಾಗಿ ಇದನ್ನು ಉಲ್ಲೆಖಿಸುತ್ತಿದ್ದನು. ಬಹುಶಃ "ತನ್ನ ಸ್ವಂತ ತಾಯಿಯೊಂದಿಗೆ ಅಲ್ಲ ಸಹಜವಾಗಿ ತನ್ನ ಮಲತಾಯಿಯೊಂದಿಗೆ ಲೈಂಗೀಕ ಸಂಬಂಧವನ್ನು ಇಟ್ಟುಕೊಂಡಿದ್ದಾನೆ."[1] ಮನುಷ್ಯನ ಸ್ವಾಭಾವಿಕ ತಾಯಿ, ಅವನ ತಂದೆಯ ಮೊದಲನೆಯ ಹೆಂಡತಿ, ಬಹುಶಃ ತೀರಿಹೋಗಿರಬಹುದು. ಅವನ ತಂದೆ ಯೌವನಸ್ಥ ಸ್ತ್ರೀಯನ್ನು, ಬಹುಶಃ ತನ್ನ ಮಗನಂತೆ ಯೌವನಸ್ಥಳಾಗಿರುವ ಸ್ತ್ರೀಯನ್ನು ವಿವಾಹವಾಗಿರಬಹುದು. ಸಾಮಾನ್ಯವಾಗಿ ಮಗನು ತನ್ನ ಮನೆಯಲ್ಲಿ ವಾಸಿಸುತ್ತಿರಬಹುದೋ? ಅವನು ತನ್ನ ತಂದೆಯ ಹೆಂಡತಿಯನ್ನು ಭ್ರಷ್ಟಗೊಳಿಸಿ ಮತ್ತು ವಿವಾಹವನ್ನು ಮುರಿದಿರಬಹುದೋ? ಮನುಷ್ಯನ ತಂದೆಯು ತೀರಿಹೋಗಿರಬಹುದೋ? ಈ ಅನೈತಿಕ ಸಂಬಂಧದ ಪ್ರಾರಂಭದ ಅಂಶ ಯಾವುದಾದರು ಭಾವನಾತ್ಮಕ ಗಲಭೆಯಾಗಿರಬಹುದೋ?

ಕೊನೆಯಲ್ಲಿ, ಈ ಸಂಗತಿಯ ವಿವರಗಳು ಸ್ವಲ್ಪ ವ್ಯತ್ಯಾಸವನ್ನು ಮಾಡುತ್ತವೆ; ಅದು ದುಷ್ಟ ಮತ್ತು ಕ್ಷಮಿಸಲಸಾಧ್ಯವಾಗಿತ್ತು. ಬಹುಶಃ ಒಬ್ಬನು ಇದನ್ನು ಅನ್ಯಜನರಿಂದ ನಿರೀಕ್ಷಿಸಬಹುದಿತ್ತು, ಆದರೆ ಸಭೆಯು ದೇವರ ಹೆಸರನ್ನು ಹೊದ್ದುಕೊಂಡ ಪರಿಶುದ್ಧ ಜನರ ಸಭೆಯಾಗಿದೆ.

ಪೌಲನು ಮುಂದೆ ತನ್ನ ತಂದೆಯ ಹೆಂಡತಿಯೊಂದಿಗೆ ವಾಸಿಸುವವನನ್ನು ಪೌಲನು ಹೀಗೆ πόρνος (*pornos*, "fornicator") ಉಲ್ಲೇಖಿಸುತ್ತಾನೆ ಅವನು πόρνη (*pornē*) ವ್ಯಭಿಚಾರಿ. ಗ್ರೀಕ್ ಲೋಕದಲ್ಲಿ πορνεία (*porneia*) ಎಂಬ ನಾಮಪದವನ್ನು ವೇಶ್ಯೆಯರ ಸೇವೆಗೆ ಉಪಯೋಗಿಸುತ್ತಿದ್ದರು. ಹೊಸ ಒಡಂಬಡಿಕೆಯಲ್ಲಿ, ಈ ಪದವನ್ನು ಹೆಚ್ಚು ವಿಶಾಲವಾಗಿ ಎಲ್ಲಾ ವಿಧದ ("fornication") ಲೈಂಗೀಕ ಅನೈತಿಕತೆಗೆ ಉಪಯೋಗಿಸಲಾಗಿದೆ. ಹೊಸ ಒಡಂಬಡಿಕೆಯ ಲೇಖಕರು ಠಿಂಡಿಟಿeiಚಿ ಸಾಮಾನ್ಯವಾಗಿ ನಾಸ್ತಿಕ ಯೆಹೂದ್ಯ ನೈತಿಕರಲ್ಲಿ ಉಪಯೋಗಿಸುತ್ತಿದ್ದಂತೆ ಉಪಯೋಗಿಸುತ್ತಿದ್ದರು. ಅವರು ಈ ಪದವನ್ನು ಯಾವುದೇ ವಿಧದ ವಿವಾಹಬಾಹಿರ ಲೈಗಿಕತೆಯನ್ನು ವ್ಯಕ್ತಪಡಿಸಲು ಅನ್ವಯಿಸುತ್ತಿದ್ದರು. ಇದು ಹಾದರ ವೇಶ್ಯಾವೃತ್ತಿ, ಸಲಿಂಗ ಕಾಮವನ್ನು ಒಳಗೊಳ್ಳುವಷ್ಟು ವಿಶಾಲವಾಗಿದೆ.[2]

ಹೊಸ ಒಡಂಬಡಿಕೆಯು ನೈಜ್ಯವಾದ ಘಟನೆಗಳು ಮತ್ತು ಅನುಭವಗಳ ಸನ್ನಿವೇಶದಲ್ಲಿ ನೈತಿಕತೆಯನ್ನು ಚರ್ಚಿಸುತ್ತದೆ. ಸಭೆಯು ನೈತಿಕ ಬೇಡಿಕೆಗಳನ್ನು ಒಳಗೊಂಡಿರುವ ನಂಬಿಕೆಯನ್ನು ಸಂಶೋಧಿಸುವ ಪ್ರಕ್ರಿಯೆಯಲ್ಲಿ ಸಭೆಯು ಇರುತ್ತದೆ. ಕ್ರೈಸ್ತರು ಎದುರಿಸಲಿಕ್ಕಿರುವ ಪ್ರತಿಯೊಂದು ನೈತಿಕ ಸನ್ನಿವೇಶಗಳಲ್ಲಿ ಕೆಲವು ಒಳ್ಳೆಯವು ಮತ್ತು ಉಳಿದವುಗಳು ಕೆಟ್ಟ ಎಂದು ಪ್ರಕಟಿಸುವದನ್ನು ಬಿಟ್ಟು, ವ್ಯವಸ್ಥಿತವಾಗಿ ಪಟ್ಟಿ ಮಾಡಲು ಪೌಲನು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಬದಲಾಗಿ, ಅವನು ಮತ್ತು ಹೊಸ ಒಡಂಬಡಿಕೆಯ ಇತರ ಲೇಖಕರು, ಪಾಪದ ಅಧೀನದಲ್ಲಿದ್ದ ಜನರೊಂದಿಗೆ ತಮ್ಮ ಸಂವಹನದ ಮೂಲಕ ನೈತಿಕತೆಯನ್ನು ಬೋಧಿಸಿದರು. ಕೆಲವೊಮ್ಮೆ ಅವರು ತಾಳ್ಮೆಯಿಂದ ಇರುತ್ತಿದ್ದರು ಮತ್ತು ಬೇಡಿಕೊಳ್ಳುತ್ತಿದ್ದರು ಮತ್ತು ಇತರ ಸಮಯಗಳಲ್ಲಿ ಅವರಿಗೆ ಬಹಳ ಬೇಡಿಕೆಗಳಿದ್ದವು. ಅವರು ಪಾಪವನ್ನು ಎದುರಿಸುತ್ತಿರುವ ಹಾಗೆ ಅದನ್ನು ನಿರ್ವಹಿಸಿದರು.

ತನ್ನ ತಂದೆಯ ಹೆಂಡತಿಯೊಂದಿಗೆ ಪಾಪದಲ್ಲಿ ಜೀವಿಸುತ್ತಿದ್ದ ಮನುಷ್ಯನ ವಿಷಯದಲ್ಲಿ, ಕೊರಿಂಥದಲ್ಲಿರುವ ಸಭೆ ದೇವರ ನೈತಿಕ ಬೇಡಿಕೆಗಳಿಗೆ ಅನುಸಾರವಾಗಿ ಜೀವಿಸುವಲ್ಲಿ ವಿಫಲವಾಯಿತು. ಇಂದು ಸಭೆಯಲ್ಲಿರುವ ವಿಫಲತೆಗಳು ಇದೇ ರೀತಿಯ ವಿಧಾನವನ್ನು ಅನುಸರಿಸುತ್ತವೆ. ಸಭೆಯ ನೈತಿಕತೆ ಲೋಕದ ಮುಂದೆ ಅದರ ಸತ್ಕೀರ್ತಿಯನ್ನು ಯಾವಾಗಲೂ ತಿರ್ಮಾನಿಸುತ್ತದೆ. ನೈತಿಕ ಜೀವಿತವನ್ನು ಜೀವಿಸುವಲ್ಲಿ ಕ್ರೈಸ್ತರ ವಿಫಲತೆ ಎಂದರೆ ಕ್ರಿಸ್ತನ ಕುರಿತಾದ ಅವರ ಉಪದೇಶವನ್ನು ಲೋಕವು ಆಸಕ್ತಿಯಿಂದ ಆಲಿಸುವದನ್ನು ಸ್ವೀಕರಿಸುವದಿಲ್ಲ. ಕ್ರೈಸ್ತ ನೈತಿಕತೆ ಮತ್ತು ಕ್ರೈಸ್ತ ಸಿದ್ಧಾಂತಗಳು ಬಿಡಿಸಲಾರದಂತೆ ಒಟ್ಟಾಗಿ ಬಂಧಿಸಲ್ಪಟ್ಟಿವೆ. ದೈವೀಕ ಜೀವಿತವು ಕ್ರಿಸ್ತನನ್ನು ದೇವರ ಮಗನೆಂದು ಅರಿಕೆ ಮಾಡವದರ ಮೂಲಕ ಹರಿದುಬರುತ್ತದೆ.

**ವಚನ 2.** ಪೌಲನು ಅಪನಂಬಿಕೆಯೊಂದಿಗೆ ಸನ್ನಿವೇಶವನ್ನು ಸಂಬೋಧಿಸಿದನು. ಇಂಥಹ ನಾಚಿಗೇಡಿನ ನಡತೆಯನ್ನು ಅವರು ಹೇಗೆ ಸಮರ್ಥಿಸಿಕೊಳ್ಳುತ್ತಾರೆ? ಅವರು ಸ್ಪಷ್ಟವಾಗಿ ವ್ಯಕ್ತವಾಗುವ ಅನೈತಿಕತೆಯನ್ನು ಕಂಡೂ ಕಾಣದಂತೆ ಇರುವಾಗ ತಮ್ಮನ್ನು ತಾವು ಜಾಣರೆಂದು ಭಾವಿಸುತ್ತಿದ್ದರೋ? ಅವರು ಹಟಮಾರಿಗಳಾದ್ದರೋ (πεφυσιωμένοι, *pephusiōmenoi*; 5:2) ಮತ್ತು **'ಉಬ್ಬಿಕೊಳ್ಳುತ್ತಿದ್ದರೋ'** (KJV)? ಬದಲಾಗಿ ದೇವರಿಲ್ಲದ ಈ ಪರಿಸ್ಥಿತಿಗಾಗಿ ಅವರು **ದುಃಖಿಸುತ್ತಿದ್ದರೋ**? ಸಹ ವಿಶ್ವಾಸಿಗಳ ಅನೈತಿಕತೆಯಿಂದಾಗಿ ಅವರು ಅವಮಾನದಿಂದ ತುಂಬಿದವರಾಗಿದ್ದರೋ? ಅವರು **ಈ ಕಾರ್ಯವನ್ನು ಮಾಡಿದವರನ್ನು** ತಮ್ಮ ಮಧ್ಯದಿಂದ ತೆಗೆದುಹಾಕಿದರೋ?

ಸಭೆಯು ಈ ಅನೈತಿಕತೆಯ ಸಹೋದರನನ್ನು ಅವನ ವರ್ತನೆಯನ್ನು ದೇವರ ಕಡೆಯಿಂದ ಬಂದ ಜ್ಞಾನವಾಗಿದೆ ಎಂದುಕೊಂಡರೋ? (1:30). ಆನರು ದೈವೀಕವಾದ ನೈತಿಕತೆಯ ಮಾದರಿಗಳನ್ನು ಅಳವಡಿಸಿಕೊಂಡ ಪರಿಣಾಮವಾಗಿ ಜ್ಞಾನವು ಬರುತ್ತದೆ. ಅದೇ ರೀತಿಯಲ್ಲಿ ಕೊರಿಂಥದ ಕ್ರೈಸ್ತರು ತಮ್ಮ ಸುತ್ತಲೂ ಇರುವ ವಿಗ್ರಹಾರಾಧಕ ಸಮಾಜದಲ್ಲಿ ಮರ್ಯಾದಸ್ತ ಜನರ ಅಳತೆಯ ಮಟ್ಟಕ್ಕೆ ಜೀವಿಸುತ್ತಿರಲಿಲ್ಲ. ನೀಡಿದ ಸನ್ನಿವೇಶದಲ್ಲಿ, ಶೋಕ ಮತ್ತು ಪಶ್ಚಾತ್ತಾಪ ಮೊಂಡುತನದ ಪರಿಣಾಮವಾಗಿ ಆದ ವಿಭಾಗಗಳಿಗಿಂತ ಮತ್ತು ಈ ಮನುಷ್ಯನ ಸ್ವೀಕೃತಿಗಿಂತ ಬಹಳ ಸಮಂಜಸವಾಗಿವೆ, ಅವರು ನಿಜವಾಗಿ ದುಃಖದಿಂದ ತುಂಬಿದ್ದರೋ? ಕ್ರೈಸ್ತ ಸಮುದಾಯವು ಇಂಥಹ ನಡತೆಯನ್ನು

ಸ್ವೀಕರಿಸಿರಲಿಕ್ಕಿಲ್ಲ. ಪಾಪದಲ್ಲಿ ಜೀವಿಸುತ್ತಿರುವ ಮನುಷ್ಯನು ಅವರ **ಮಧ್ಯದಿಂದ** ತೆಗೆದುಹಾಕಲ್ಪಟ್ಟಿರಬಹುದು.

**ವಚನ 3.** ಪೌಲನ ವಯಕ್ತಿಕ ಬೇಟಿಯಿಂದ ಕೊರಿಂಥದ ಸಭೆಗೆ ಸಹಾಯಮಾಡಲು ಅಡೆತಡೆಗಳಿದ್ದಾಗ್ಯೂ, ಅವನು ಆತ್ಮದಲ್ಲಿ ಅವರೊಂದಿಗೆ ಇದ್ದನು. **ಸಂಕ್ಷಿಪ್ತವಾಗಿ ದೇಹದಿಂ ದೂರವಾಗಿದ್ದರೂ ಆತ್ಮದಿಂದ ಹತ್ತಿರದಲ್ಲಿದ್ದ**ದನು ವಿವಿಧ ಮಾರ್ಗಗಳಿಂದ ತಿಳಿದುಕೊಳ್ಳಬಹುದು ಎಂಬದು ಅಪೊಸ್ತಲನ ಅರ್ಥವಾಗಿದೆ, ಆತನು ತನ್ನ ವಯಕ್ತಿಕ ಉಪಸ್ಥಿತಿ ಮತ್ತು ವಯಕ್ತಿಕ ತೊಡಿಸುವಿಕೆಗೆ ಸಭೆಗೆ ನೀಡುವ ಎಚ್ಚರಿಕೆಗಳು ಆತನು ಸಭೆಗೆ ನೀಡುತ್ತಿರುವ ಬದಲಿ ವ್ಯವಸ್ಥೆಯಾಗಿದೆಯೋ? ಬಹುಶಃ, ಪದಗಳು ಹೆಚ್ಚು ತೂಕವುಳ್ಳ ಸೂಚನೆಗಳನ್ನು ಹೊಂದಿವೆ.

5:2ರಲ್ಲಿ ಖಂಡಿತವಾಗಿ ಹೇಳುವ "ನೀವು" (ὑμεῖς, *humeis*) ಎಂಬ ಪದಕ್ಕೆ ವಿರುದ್ಧವಾಗಿ 5:3ರಲ್ಲಿ ಖಂಡಿತವಾಗಿ ಹೇಳುವ "ನಾನು" (ἐγώ, *egō*) ಎಂಬ ಪದವನ್ನು ಉಪಯೋಗಿಸುವಾಗ, ಅಪೊಸ್ತಲನು ಅವರಿಗೆ ವಿಷಯದ ಮೇಲೆ ತೀರ್ಪನ್ನು ನೀಡುವಾಗ ತಾನು ದೈಹಿಕವಾಗಿ ಉಪಸ್ಥಿತನಿರುವದು ಅವಶ್ಯವಿಲ್ಲ ಎಂದು ಅವರಿಗೆ ತಿಳಿಸಿದ್ದಾನೆ. ಅವನ ಹೃದಯ ಮತ್ತು ಮನಸ್ಸುಗಳೊಂದಗೆ, ಪೌಲನು ಅವರೊಂದಿಗೆ ಕೊರಿಂಥದಲ್ಲಿದ್ದನು. ಅವರ ಸಮೂಹದಲ್ಲಿ ಆತನು ಕಣ್ಣಿಗೆ ಕಾಣದಿರುವ ಅತಿಥಿಯಾಗಿದ್ದನು. ಹಾಗೂ, (ಅವನು) **ಆಗಲೇ ಹತ್ತಿರವಿದ್ದವನಂತೆ**, ಅವನು ಹೀಗೆ ಇದನ್ನು ಮಾಡಿದ ಮನುಷ್ಯನಿಗೆ **ಈಗಾಗಲೇ ತೀರ್ಪನ್ನು ನೀಡಿದ್ದೇನೆ** ಎಂದು ಪೌಲನು ಹೇಳುತ್ತಾನೆ. ಕ್ರಿಸ್ತನ ಅಪೊಸ್ತಲನಾಗಿ, ನಂಬಿಕೆಯಲ್ಲಿ ಜೀವಿಸುವದೆಂದರೆ ನೈತಿಕ ಬೇಡಿಕೆಗಳನ್ನು ಮತ್ತು ಹಂಗನ್ನು ಒಳಗೊಂಡಿದೆ ಎಂದು ಪೌಲನು ಪ್ರಕಟಿಸುತ್ತಾನೆ.

**ವಚನ 4.** 5:4 ರ ಅನುವಾದ ವ್ಯತ್ಯಾಸವನ್ನು ಹೊಂದಿದೆ ಯಾಕಂದರೆ ನಮ್ಮ **ಕರ್ತನಾದ ಯೇಸುವಿನ** ಹೆಸರಿನಲ್ಲಿ ಎಂಬ ವಾಕ್ಯಭಾಗ ಏನನ್ನು ನಿಯಂತ್ರಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವದು ಕಠಿಣವಾಗಿದೆ. NRSV ವಚನ 4 ಮತ್ತು ವಚನ 3 ನ್ನು ಇದರ ಪರಿಣಾಮವಾಗಿ: "ಇಂಥಹ ಕಾರ್ಯಮಾಡಿದ ಮನುಷ್ಯನ ಮೇಲೆ ಕರ್ತನಾದ ಯೇಸುವಿನ ಹೆಸರಿನಲ್ಲಿ ಈಗಾಗಲೇ ತೀರ್ಪನ್ನು ಪ್ರಕಟಿಸಿದ್ದೇನೆ" (5:3ಬ, 4ಅ) ಎರಡನ್ನೂ ಜೊತೆ ಸೇರಿಸುತ್ತದೆ. ವಾಕ್ಯಾಂಗವನ್ನು ಸಭೆಯ ಸಮೂಹದೊಂದಿಗೆ ಜೊತೆ ಸೇರಿಸಿ NIV ಈ ಅನುವಾದವನ್ನು ನೀಡುತ್ತದೆ: "ನೀವು ಸಮೂಹವಾಗಿ ಸೇರಿಬರುವಾಗ . . . , ಮತ್ತು ನಮ್ಮ ಕರ್ತನಾದ ಯೇಸುವಿನ ಬಲವು ಪ್ರತ್ಯಕ್ಷವಾಗಿರುವಾಗ." ಅಪರಾಧಿಯನ್ನು ಸೈತಾನನಿಂದ ವಿಮೋಚಿಸುವ ಪೌಲನ ನಿರ್ಧಾರವನ್ನು ಸ್ಪಷ್ಟಪಡಿಸುವ ಹಾಗೆ NASB ವಾಕ್ಯಾಂಗವನ್ನು ಮಂಡಿಸುತ್ತದೆ. ಅದು "ಕರ್ತನಾದ ಯೇಸುವಿನ ಹೆಸರಿನಲ್ಲಿ" ನೀವು **ಒಟ್ಟುಗೂಡಿ ಬಂದಿರಲಾಗಿ** . . . ಎಂದು ಹೇಳುತ್ತದೆ. ವ್ಯತ್ಯಾಸಗಳು ಚಿಕ್ಕವಾಗಿರಬಹುದು, ಆದರೆ ಪೌಲನು ಈಗಾಗಲೇ ಮನುಷ್ಯನಿಗೆ ತೀರ್ಪುನೀಡಿದ್ದಾನೆ ಎಂಬ ಧೃಢೀಕರಣವನ್ನು (5:3) NRSV ಬೆಂಬಲಿಸುತ್ತದೆ.

ನಮ್ಮ **ಕರ್ತನಾದ ಯೇಸುವಿನ ಸಾಮರ್ಥ್ಯ** ಎಂಬ ವಾಕ್ಯಾಂಗವು ಏನನ್ನು ಮಾರ್ಪಡಿಸುತ್ತದೆ ಎಂಬುದರ ಕುರಿತು ಪ್ರಶ್ನೆ ಉದ್ಭವಿಸುತ್ತದೆ. ಪೌಲನ ಆತ್ಮೀಕ ಪ್ರಸನ್ನತೆ "ಕರ್ತನಾದ ಯೇಸುವಿನ ಬಲದೊಂದಿಗೆ" ಅವರೊಂದಿಗೆ ಇತ್ತೋ ಅಥವಾ ವಾಕ್ಯಾಂಗವು

ಪಾಪದಲ್ಲಿ ಜೀವಿಸುತ್ತಿರುವ ಮನುಷ್ಯನನ್ನು ಸೈತಾನನಿಗೆ ಒಪ್ಪಿಸಿಕೊಡುವದರೊಂದಿಗೆ ಸೇರಿಸಲಾಗಿದೆಯೋ? ಈ ಪ್ರಶ್ನೆಗಳು, ಹೆಚ್ಚಾದ ಭಾಗಗಳಲ್ಲಿ ಪಾರಿಭಾಷಿಕವಾಗಿದೆ, ಆದರೆ ಈ ವಚನದ ಅರ್ಥ ಮತ್ತು ಇದನ್ನು ಅನುಸರಿಸುವವುಗಳೊಂದಿಗೆ ಸ್ಪಷ್ಟವಾಗಿವೆ. ಅಪೊಸ್ತಲನಾದ ಪೌಲನ ಅಧಿಕಾರ ಯೇಸುವಿನ ಹೆಸರಿನೊಂದಿಗೆ ಸೇರಿಸಲ್ಪಟ್ಟಿದೆ, ವಿಶ್ವಾಸಿಗಳ ಸಭೆಯಲ್ಲಿ ಒಟ್ಟಾರೆ ಅನೈತಿಕತೆಯ ಸ್ವೀಕರಿಸುವಿಕೆ ಸಹಿಸಲಸಾಧ್ಯವಾಗಿದೆ ಎಂದು ಪ್ರಕಟಿಸುತ್ತಾನೆ.

**ವಚನ 5.** ಇಲ್ಲಿ ಮಾತ್ರವಲ್ಲ ಮತ್ತು 1 ತಿಮೋಥೆ 1:20ರಲ್ಲಿ (Hymenaeus and Alexander ಅವರ ಕುರಿತು ಮತನಾಡುವಾಗ) ಪೌಲನು ಇಂಥವುಗಳನ್ನು **ಸೈತಾನನಿಗೆ ಒಪ್ಪಿಸಿಕೊಡಬೇಕು** ಎಂದು ಸಭೆಗಳಿಗೆ ಸೂಚಿಸಿದ್ದನು. ಪದಗಳು ಏನನ್ನೇ ಸೂಚಿಸಲಿ, ಪೌಲನು ಅಪರಾಧಿಯನ್ನು ದೇವ ಜನರ, ಸಭೆಯ ಅನ್ಯೋನ್ಯತೆಯಿಂದ ಪ್ರತ್ಯೇಕಿಸಬೇಕು ಎಂದು ಸ್ಪಷ್ಟವಾಗಿ ನಿರೀಕ್ಷಿಸಿದ್ದನು. ಕ್ರಿಸ್ತನು ತನ್ನ ಪ್ರಭಾವವನ್ನು ಜನರ ನಂಬಿಕೆ ಮತ್ತು ನಡತೆಯ ಮೇಲೆ ಪ್ರಯೋಗಿಸುವ ಕ್ಷೇತ್ರ ಸಭೆಯಾಗಿದೆ. ಕ್ರಿಸ್ತನ ದೇಹದಿಂದ ಹೊರಗೆ ಲೋಕದಲ್ಲೆಲ್ಲಾ ಸೈತಾನನ ಸಾಮ್ರಾಜ್ಯ ಇರುತ್ತದೆ.

ಸೈತಾನನ ಮಾತಿನಂತೆ ನಡೆಯುವದರ ಪರಿಣಾಮ **ದೇಹದ ನಾಶನ**? ಪೌಲನು ಸೈತಾನನನ್ನು ದೇವರ ಶಿಸ್ತಿನಲ್ಲಿ ಆಸಕ್ತನಾಗಿರುವವನು ಎಂದು ನೀರಿಕ್ಷಿಸುತ್ತಾನೆ ಎಂದು ನಂಬುವದು ಬಹಳ ಕಷ್ಟಕರವಾಗಿದೆ. ಸೈತಾನನು ಮನುಷ್ಯನನ್ನು ರೂಪಿಸುತ್ತಾನೆ, ಇದರಿಂದಾಗಿ ಅವನು **ಕರ್ತನಾದ ಯೇಸುವಿನ ದಿನದಲ್ಲಿ** ರಕ್ಷಣೆ ಹೊಂದುತ್ತಾನೆ ಎಂದು ಅವನು ಖಂಡಿತವಾಗಿ ಹೇಳುತ್ತಿಲ್ಲ. ಬಹುಶಃ ಪಾಪದಲ್ಲಿ ಮುಳುಗಿಹೋಗಿ ಅದೇ ಸಮಯದಲ್ಲಿ ಪಾಪದ ಮುಖವಾಡದಿಂದ ದೇವ ಜನರೊಂದಿಗೆ ಸಡಿಲವಾದ ಸಂಬಂಧವನ್ನು ನಿರ್ವಹಿಸುತ್ತಾ ಪಾಪದ ನಾಶನಕರವಾದ ಪರಿಣಾಮಗಳು ವ್ಯಕ್ತವಾಗಬಾರದೆಂದು ಮುಖವಾಡ ಧರಿಸುವದು ಎಂಬ ಅರ್ಥವನ್ನು ನೀಡುತ್ತಾನೆ. ಒಬ್ಬ ವ್ಯಕ್ತಿ ಸೈತಾನನಿಂದ ವಿಮೋಚನೆಯನ್ನು ಹೊಂದಿ ಸಭೆಯೊಂದಿಗಿರುವ ಅವನ ಅನ್ಯೋನ್ಯತೆ ಗಂಭೀರವಾಗುತ್ತದೋ, ಆ ತನ್ನ ಪಾಪಗಳನ್ನು ನೇರವಾಗಿ ಎದುರಿಸುವ ಒತ್ತಾಯವನ್ನು ಹೊಂದುತ್ತಾನೆ. ಈ ರೀತಿಯಲ್ಲಿ, "ಇಂಥಹ ಒಬ್ಬನನ್ನು ಸೈತಾನನಿಗೆ" ವಿಮೋಚಿಸುವ ಉದ್ದೇಶಪೂರ್ವಕವಾದ ಉದ್ದೇಶ - ಮುಖ್ಯವಾಗಿ, ರಕ್ಷಣೆಯ ಉದ್ದೇಶ - ಸಾಧಿಸುವದಕ್ಕಾಗಿ. ಒಬ್ಬ ಮನುಷ್ಯನು ತನ್ನ ಪಾಪದ ಕತ್ತಲನ್ನು ನೋಡುವಾಗ, ಅದರ ಪರಿಣಾಮ ಅವನ ಅಗೌರವ ಪೂರ್ವಕವಾದ ವರ್ತನೆಯ ಬೇರುಗಳಾಗಿರುವ ಶರೀರದ ಇಚ್ಛೆಗಳ ನಾಶನ. ಸೈತಾನನು ದೇವರ ಶಿಸ್ತುಗಾರನಾಗಿರುವಾಗ, ಅವನು ಮಾಡುತ್ತಿರುವದು ಸ್ವ-ಇಚ್ಛೆಯಿಂದಲ್ಲ. ಪಾಪವು ತನ್ನಷ್ಟಕ್ಕೆ ಪೋಷಣೆಯನ್ನು ಹೊಂದಿ ಕಷ್ಟಸಂಕಟಗಳಿಗೆ ಜನ್ಮವನ್ನು ನೀಡುತ್ತದೆ, ಇದರಿಂದಾಗಿ ಪಾಪದ ದುಃಖಕರವಾದ ಪರಿಣಾಮಗಳು ಒಬ್ಬನಿಗೆ ಪ್ರಜ್ಞೆಯನ್ನು ನೀಡಲು ಕಾರಣವಾಗುತ್ತವೆ (ಲೂಕ 15:17).

ಕೆಲವು ಶರೀರದ ನಾಶನ ನಿಜವಾದ ದೈಹಿಕ ಪರಿಣಾಮಗಳನ್ನು ಉಲ್ಲೇಖಿಸುತ್ತದೆ ಎಂದು ಕಲ್ಪಿಸುತ್ತಾರೆ (ಅನನೀಯ ಮತ್ತು ಸಫೈರಳ ವಿಷಯದಲ್ಲಿದ್ದಂತೆ ಅ.ಕೃ. 5:1-11 ಮತ್ತು ಅ.ಕೃ. 13:8, 11 ರಲ್ಲಿದ್ದಂತೆ ಅವನು ಎಲುಮ). ಒಂದುವೇಳೆ ವಿಷಯವು ಹಾಗಿದ್ದಲ್ಲಿ, ದೈಹೀಕ ಕಾಯಿಲೆಗಳು ಮತ್ತು ಪಾಪ ಯಾವಾಗಲೂ ನೇರವಾದ ಸಂಬಂಧವನ್ನು ಹೊಂದಿರುತ್ತವೆ,

ಪರಿಣಾಮವನ್ನು ಸತ್ಯವೇದದ ಬೋಧನೆಯೊಂದಿಗೆ ಮರುಸಂಧಾನ ಮಾಡುವದು ಕಠಿಣವಾಗಿದೆ (ಉದಾಹರಣೆ, ಯೋಹಾನ 9:3). ಇಷ್ಟಂತೂ ಸ್ಪಷ್ಟವಾಗಿದೆ: ಸಭೆಯ ಶಿಸ್ತು ನೀತಿವಂತಿಕೆಯ ತಿರಸ್ಕಾರವನ್ನು ವ್ಯಕ್ತಪಡಿಸುವ ಉದ್ದೇಶಕ್ಕಾಗಿ ಮಾತ್ರವಲ್ಲ. ಇದು ಪಾಪಿಯ ಆತ್ಮವನ್ನು ನ್ಯಾಯತೀರ್ಪಿನ ದಿನದಲ್ಲಿ ಕರ್ತನಿಗಾಗಿ ಸಂಪಾದಿಸಿಕೊಳ್ಳುವ ಉದ್ದೇಶಕ್ಕಾಗಿದೆ.

## ಸಭೆಯ ಶುದ್ದೀಕರಣ (5:6-8)

ವೇಗವಾಗಿ ಮತ್ತು ನಿರ್ಧಾರಯುತವಾಗಿ ಕಾರ್ಯತತ್ಪರವಾಗುವದು ಅನಿವಾರ್ಯವಾಗಿದೆ. ಪಸ್ಕಹಬ್ಬವು ಅಪೊಸ್ತಲರಿಂದ ಕ್ರಿಸ್ತನ ಪ್ರಾಯಶ್ಚಿತ್ತದ ಉದಾಹರಣೆಯಾಗಿ ಉಪಯೋಗಿಸಲ್ಪಟ್ಟಿತು. ಪೌಲನು ಸಭಿಕರನ್ನು ಪಾಪದಲ್ಲಿರುವ ಮನುಷ್ಯನನ್ನು ಶಿಸ್ತಿಗೆ ಒಳಪಡಿಸಬೇಕೆಂದು ಬೇಡಿಕೊಳ್ಳುತ್ತಾನೆ. ಕ್ರೈಸ್ತರು ಕ್ರಿಸ್ತನಿಂದ ಶುದ್ದೀಕರಣವನ್ನು ಹೊಂದಿದ ಮೇಲೆ, ದೇವ ಜನರು ಹೇಗೆ ಇರಬೇಕೆಂದು ಸೃಷ್ಟಿಸಿದಾನೋ, ಅದರಂತೆ ಜೀವಿಸಬೇಕು. ಕ್ರಿಸ್ತನ ಸಭೆಯ ಪರಿಶುದ್ಧತೆ ಆತನ ಹೆಸರನ್ನು ಧರಿಸಿರುವ ಜನರು ದೈವೀಕ ಜೀವಿತವನ್ನು ಪ್ರತಿಬಿಂಬಿಸುತ್ತದೆ.

**[6]ನೀವು ಹಿಗ್ಗುವದು ಒಳ್ಳೇದಲ್ಲ. ಸ್ವಲ್ಪ ಹುಳಿ ಕಲಿಸಿದರೆ ಕಣಿಕವೆಲ್ಲಾ ಹುಳಿಯಾಗುತ್ತದೆಂಬುದು ನಿಮಗೆ ತಿಳಿಯದೋ? [7]ನೀವು ಹುಳಿಯಿಲ್ಲವರೆನಿಸಿಕೊಂಡದ್ದರಿಂದ ಹಳೆ ಹುಳಿಯನ್ನು ತೆಗೆದು ಹಾಕಿ ಹೊಸ ಕಣಿಕದಂತಾಗಿರ್ರಿ. ಯಾಕಂದರೆ ನಮ್ಮ ಪಸ್ಕದ ಯಜ್ಞದ ಕುರಿಯು ಕೊಯಿದದೆ; ಅದಾವದಂದರೆ ಕ್ರಿಸ್ತನೇ. [8]ಆದಕಾರಣ ನಾವು ಹಳೇ ಹುಳಿಯನ್ನು ಅಂದರೆ ದುರ್ಮಾಗತ್ವ ದುಷ್ಟತ್ವ ಎಂಬ ಹುಳಿಯನ್ನು ಇಟ್ಟುಕೊಳ್ಳದೆ ಸರಳತೆ ಸತ್ಯತೆ ಎಂಬ ಹುಳಿಯಿಲ್ಲದ ರೊಟ್ಟಿಯನ್ನೇ ತೆಗೆದುಕೊಂಡು ಹಬ್ಬವನ್ನು ಆಚರಿಸೋಣ.**

**ವಚನ 6.** ದೀನತೆ ಪಶ್ಚಾತ್ತಾಪಕ್ಕೆ ಪೂರ್ವಾಗತ್ಯವಾಗಿದೆ. ಕೊರಿಂಥದವರ ಮೊಂಡುತನ ವಿಭಾಗಗಳು ಮತ್ತು ಪೌಲನ ಕುರಿತು ದೂರುವ ಕೊಡುಗೆಯನ್ನು ನೀಡಿತು. ಈ ಸಹೋದರರು ತಮ್ಮ ತಲೆಯನ್ನು ನಾಚಿಕೆಯಿಂದ ತಗ್ಗಿಸಬೇಕಾದ ಸಮಯದಲ್ಲಿ ಅವರು ತಮ್ಮ ಗದ್ದವನ್ನು ಹೆಮ್ಮೆಯಿಂದ ಮೇಲಕ್ಕೆತ್ತಿದ್ದಾರೆ. ಮೊಂಡತನ, ನಾಚಿಕೆ, ಹೊಗಳಿಕೊಳ್ಳುವದು ಮತ್ತು ದೀನತೆ ಎಲ್ಲವೂ ಪರಸ್ಪರ ಸಂಬಂಧವನ್ನು ಹೊಂದಿವೆ. ಪೌಲನು ತನ್ನ ತೀರ್ಪನ್ನು ಸ್ಪಷ್ಟಪಡಿಸುತ್ತಾನೆ. **ನೀವು ಹಿಗ್ಗುವದು ಒಳ್ಳೇದಲ್ಲ.** ತನ್ನ ತಂದೆಯ ಹೆಂಡತಿಯೊಂದಿಗೆ ಪಾಪದಲ್ಲಿ ಜೀವಿಸುವ ಒಬ್ಬ ಮನುಷ್ಯನ ಕುರಿತು ಸಭೆಯ ತಾಳ್ಮೆ ಹೊಗಳಿಕೊಳ್ಳುವಿಕೆಯ ಮತ್ತು ಮೊಂಡುತನ ಸಭೆಯ ಪಿಡುಗಿನ ಸಂಕೇತವಾಗಿದೆ (1:29; 3:21; 4:6, 18; 5:2; 8:1). ಹೊಗಳಿಕೆ ಪಶ್ಚಾತ್ತಾಪಕ್ಕೆ ಅವಶ್ಯವಿರುವ ಸ್ವ-ಪರೀಕ್ಷೆ ಮತ್ತು ದೀನತೆಗೆ ಅಡತಡೆಯಾಗಿದೆ. ಹೊಗಳಿಕೆ ಸಭೆಯನ್ನು ಲೋಕದೊಂದಿಗೆ ಸ್ಥಿರಪಡಿಸುತ್ತದೆ; ಅದು ಕ್ರಿಸ್ತನ ಹೆಸರನ್ನು ಅಗೌರವಕ್ಕೆ ಮತ್ತು ವಿಶ್ವಾಸಿಗಳನ್ನು ಕರ್ತನ ಆಶೀರ್ವಾದದಿಂದ ಮುರಿದುಕೊಳ್ಳುವದಕ್ಕೆ ಕಾರಣವಾಗುತ್ತದೆ.

ಪೌಲನು ತನ್ನ ವಿಷಯವನ್ನು ಅಡುಗೆಮನೆಯ ಸಾಮ್ಯದೊಂದಿಗೆ ಒತ್ತು ನೀಡುತ್ತಾನೆ. ಸ್ವಲ್ಪ ಹುಳಿ ಹಿಟ್ಟನ್ನು ದೊಡ್ಡ ಕಣಕದಲ್ಲಿ ಸೇರಿಸುವದರಿಂದ ಅದು ಮೌನವಾಗಿ ಮತ್ತು

ವೇಗವಾಗಿ ಸಂಪೂರ್ಣ ಕಣಕವನ್ನು ಹುಳಿ ಮಾಡುತ್ತದೆ. **ಸ್ವಲ್ಪ ಹುಳಿ ಸಂಪೂರ್ಣ ಕಣಕವನ್ನು ಹುಳಿಮಾಡುತ್ತದೆ** ಎಂದು ಹೇಳುತ್ತಾನೆ. ಯೇಸು ಕಣಕವನ್ನು ಸಕಾರಾತ್ಮಕವಾದ ಭಾವನೆಯಲ್ಲಿ ಹೇಳುತ್ತಾನೆ: ದೇವರರಾಜ್ಯವು ಲೋಕವನ್ನು ಹುಳಿಯಂತೆ ಬೇಧಿಸಬೇಕು (ಮತ್ತಾಯ 13:33); ಆದರೆ ಕೆಟ್ಟತನ, ಸಹ, ಹುಳಿಯಂತೆ ಹರಡಿಕೊಳ್ಳಬಹುದು. ಕ್ರಿಸ್ತನು ಪರಿಶುದ್ಧ ಜೀವಿತಕ್ಕಾಗಿ ತನ್ನ ಜನರಿಗೆ ನೀಡಿರುವ ಸಂಪನ್ಮೂಲಗಳೊಂದಿಗೆ ಸಹ. ಪಾಪವು ಅಗೋಚರವಾಗಿದ್ದು ಆಕ್ರಮಿಸುವದಕ್ಕೆ ಸಿದ್ಧವಾಗಿರುತ್ತದೆ. ನಂಬಿಗಸ್ತ ಕ್ರೈಸ್ತರ ಸಹವಾಸದಲ್ಲಿ, ಹೋರಾಟ ಮಾಡುತ್ತಿರುವ ಶಿಷ್ಯರು ಬೆಂಬಲವನ್ನು ಮತ್ತು ಕೆಡುಕನ್ನು ತುಳಿಯುವ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಸಭೆಯಲ್ಲಿ ಪಾಪವು ಮಿಕ್ತವಾದ ಮಾರ್ಗವನ್ನು ಕಂಡುಕೊಳ್ಳುವಾಗ, ನಿರ್ಧಾರ ಬಲಹೀನವಾಗುತ್ತದೆ; ಆಗ ಅದ್ವೈವೀಕತೆ ಹರಡಿಕೊಳ್ಳುತ್ತದೆ. ಸಭೆಯ ಸದಸ್ಯರು ಪರಸ್ಪರರೊಂದಿಗೆ ನಿಕಟವಾಗಿ ಸಂಬಂಧ ಹೊಂದಿರುವದನ್ನು ಕಂಡುಕೊಳ್ಳುತ್ತಾರೆ. ಯಾರ ಪಾಪವು ಆತನ ಖಂಡಿತವಾಗಿ ಅವರ ಸ್ವಂತ ವ್ಯವಹಾರವಲ್ಲ. ಕ್ರಿಸ್ತನ ಹೆಸರನ್ನು ಧರಿಸಿಕೊಂಡಿರುವ ಪ್ರತಿಯೊಬ್ಬನೂ, ಒಂದು ವಿಧದಲ್ಲಿ ತನ್ನ ಸಹೋದರನನ್ನು ಕಾಯುವಾತನಾಗಿದ್ದಾನೆ (ನೋಡಿರಿ ಆದಿಕಾಂಡ 4:9). ಒಬ್ಬ ವ್ಯಕ್ತಿಯ ಪಾಪವು ಹುಳಿ ಹಿಟ್ಟಿನಂತೆ ದೇಹದಲ್ಲಿ ಹರಡಿಕೊಳ್ಳುವ ಪ್ರವೃತ್ತಿಯನ್ನು ಹೊಂದಿರುವಾಗ ಕಣಕದ ಮೇಲೆ ಪರಿಣಾವನ್ನು ಬೀರುತ್ತದೆ.

ಕೊರಿಂಥದಲ್ಲಿರುವ ಬೆಳವಣಿಗೆಯನ್ನು ಅಧೈರ್ಯಪಡಿಸುವಂತೆ ಅಪೊಸ್ತಲರಿಗೂ ಸಹ ಇರಬಹುದು, ಅವನು ಇನ್ನೂ ಜನರ ತಪ್ಪುಗಳೊಂದಿಗೆ ವ್ಯವಹರಿಸಿದನು ಮತ್ತು ಅವರಿಗೆ ಪಶ್ಚಾತ್ತಾಪಕ್ಕೆ ಕರೆ ನೀಡಿದನು. ದೇವರ ರಾಜ್ಯದ ಕೆಲಸಗಾಗರು ತಪ್ಪಾಗಿ ತಿಳಿದುಕೊಂಡವರನ್ನು ಸಂಧಿಸುವಾಗ ನಿರಾಶರಾಗಬಾರದು. ಅವನು ಜನರನ್ನು ಅನೈತಿಕತೆಯ ಅಪರಾಧಿಗಳೆಂದು ಅಥವಾ ಸುಳ್ಳು ಸಿದ್ಧಾಂತಗಳ ಹಿಂಬಾಲಕರು ಕಂಡುಕೊಳ್ಳುವಾಗ ಕೈಬಿಡಲಿಲ್ಲ. ಮಿತಿಯಲ್ಲಿ, ಕ್ರೈಸ್ತರಾಗಿರುವದೆಂದರೆ ವಾಸ್ತವವಾದಿಗಳಾಗಿರುವದು. Francis Schaeffer ಹೀಗೆ ಬರೆಯುತ್ತಾರೆ,

> ಅನೇಕ ಅದ್ಭುತ ಕಾರ್ಯಗಳು ನಾಶವಾಗುತ್ತಿವೆ ಯಾಕಂದರೆ ಜನರು ಪೂರ್ವಗ್ರಹಿಕೆಯ ಮತ್ತು ರೋಮಾಂಚಕ ಕಾರ್ಯಗಳನ್ನು, ಪರಿಪೂರ್ಣ ಸಂಗತಿಗಳು ಹೇಗೆ ಇರಬೇಕು ಎಂಬುದನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ, ಮತ್ತು ಯಾವುದರಲ್ಲಿಯೂ ನೆಲೆಗೊಳ್ಳುವದಿಲ್ಲ ಮತ್ತು ಹೀಗೆ ಅವರು ಏನಾಗಬೇಕೋ ಅದನ್ನು ಹಿಸುಕಿಹಾಕಿದ್ದಾರೆ ಎಂದು ನಾನು ಧೃಢವಾಗಿ ನಂಬುತ್ತೇನೆ.[3]

**ವಚನ 7.** ತನ್ನ ತಂದೆಯ ಹೆಂಡತಿಯೊಂದಿಗೆ ವಾಸಿಸುತ್ತಿರುವ ಮನುಷ್ಯನು ಪಾಪವೆಂಬ ಹಳೆ ಹುಳಿಯಂತೆ ಅದನ್ನು ಕೊರಿಂಥದಲ್ಲಿರುವ ಸಭಿಕರಿಂದ ಕಿತ್ತುಹಾಕಬೇಕಾಗಿದೆ. ಕ್ರಿಸ್ತನಲ್ಲಿ ಧೃಢತೆಗೆ ಸಭೆಯು ಶುದ್ದೀಕರಿಸಲ್ಪಟ್ಟು ಮತ್ತು ಹೊಸದಾಗುವದರ ಅವಶ್ಯಕತೆಯಿದೆ. ಪೌಲನು ಈ ವಿಶ್ವಾಸಿಗಳನ್ನು ಕ್ರಿಸ್ತನು ಏತಕ್ಕಾಗಿ ಸೃಷ್ಟಿಸಿದ್ದಾನೋ ಆ ರೀತಿಯಲ್ಲಿ ದೇಹವು ಇರಬೇಕು; ಪರಿಶುದ್ಧ ಜನರು ಶರೀರದ ಆಶೆಗಳನ್ನು ಪೂರೈಸುವದನ್ನು ಜಯಿಸಬೇಕು. **ನಮ್ಮ ಪಸ್ಕವಾಗಿರುವ ಕ್ರಿಸ್ತನು** ದೇವರಿಗೆ ಮಹಿಮೆಯನ್ನು ತರುವ ಪರಿಶುದ್ಧ ಜನರನ್ನು ಸೃಷ್ಟಿಸುವದಕ್ಕಾಗಿ ಮರಣ ಹೊಂದಿದನು.

"ಕುರಿಮರಿ" ಎಂಬ ಪದ NASBಯ ವಚನ 7ರಲ್ಲಿ ಕಾಣಿಸಿಕೊಳ್ಳುವದಿಲ್ಲ, ಆದರೆ ಪೌಲನು ಯೇಸುವನ್ನು "ನಮ್ಮ ಪಸ್ಕ" ಎಂದು ಕರೆದಿರುವದು ಮತ್ತು "ಅವನು ಯಜ್ಞವಾಗಿ ಸಮರ್ಪಿಸಲ್ಪಟ್ಟನು" ಎಂದು ಸೇರಿಸಿರುವದು ಸತ್ಯ. ಕ್ರೂಜೆಯ ಮೇಲೆ ಕ್ರಿಸ್ತನು ಪಸ್ಕದ ಸಂಜೆ ಯಜ್ಞವನ್ನು ಅರ್ಪಿಸುವ ಕುರಿಗೆ ದೃಷ್ಟಾಂತವಾಗಿದ್ದಾನೆ ಎಂದು ಅಪೊಸ್ತಲನು ಹೇಳುತ್ತಿರಬಹುದು. ತಾಂತ್ರಿಕವಾಗಿ, ಪಸ್ಕಹಬ್ಬದ ಬಲಿ ಮರಿ ಅಥವಾ ಕುರಿಯಾಗಿರಬಹುದು (ವಿಮೋಚನಕಾಂಡ 12:5), ಆದರೆ ಅದು ಸಾಮಾನ್ಯವಾಗಿ ಕುರಿಮರಿಯಾಗಿತ್ತು. ಪಸ್ಕ ಹಬ್ಬದ ಕುರಿಮರಿಯ ಕಲ್ಪನೆ ಕ್ರಿಸ್ತನೆಡೆಗೆ ದೃಷ್ಟಿಸುವ ಎರಡು ವಿಧಗಳಾಗಿವೆ. ಮೊದಲನೆಯದಾಗಿ, ಕುರಿಮರಿ ನಿರುಪದ್ರವಿ, ಮುಗ್ಧ ಎಂದು ಸಲಹೆ ನೀಡುತ್ತದೆ, ಹಾಗೂ, ಯೇಸು ಪಸ್ಕದ ಬಲಿಯಾಗಿದ್ದಾನೆ ಎಂಬ ಕಲ್ಪನೆ ಯಾವಾಗಲೂ ದೇವರ ಕುರಿಮರಿಯ ಮುಗ್ಧತೆಯ ಮೇಲೆ ಗಮನವನ್ನು ಕೇಂದ್ರಿಕರಿಸುವದಿಲ್ಲ. ಅದು ಸಾಮಾನ್ಯವಾಗಿ, ಅದರ ಎರಡನೆಯ ಕಲ್ಪನೆಯಲ್ಲಿದೆ, ಅದು ಪಾಪದ ಪ್ರಾಯಶ್ಚಿತ್ತವನ್ನು ಪ್ರಕಟಿಸುತ್ತದೆ ಅಥವಾ ಪಾಪದ ವಿರುದ್ಧವಾಗಿ ದೇವರ ಕೋಪದ ಸಮಾಧಾನ ಪಡಿಸುವಿಕೆಯಾಗಿದೆ. ಈ ಕಲ್ಪನೆಯು ದೇವರು "ಸುವಾರ್ತೆಗೆ ವಿಧೇಯರಾಗದೇ ಇರುವವರ" ಮೇಲೆ ತೀರ್ಪನ್ನು ಬರಮಾಡುವಾದು ನಂಬಿಗಸ್ತರ ಪಾಪವನ್ನು ಮುಂದೂಡುವದನ್ನು ಮನಸ್ಸಿನಲ್ಲಿ ತರುತ್ತದೆ (2 ಥೆಸಲೋನಿಕ 1:8). ಅದೇ ಸಮಯದಲ್ಲಿ ಯೋಹಾನ ಮತ್ತು ಪೇತ್ರ ಯೆಸುವನ್ನು "ಕುರಿಮರಿ" ಎಂದು ಉಲ್ಲೇಖಿಸುತ್ತಾರೆ (ಯೋಹಾನ 1:29, 36; ಪ್ರಕಟನೆ 5:6; ನೋಡಿರಿ 1 ಪೇತ್ರ 1:19), ಅವನನ್ನು ನೇರವಾಗಿ ಪಸ್ಕದ ಕುರಿಮರಿಯೆಂದು ಚಿತ್ರಿಸುತ್ತಿಲ್ಲ. ಪ್ರತಿಯೊಂದು ಉಲ್ಲೇಖದಲ್ಲಿ ಯೇಸುವನ್ನು ಪಸ್ಕದ "ಕುರಿಮರಿ" ಎಂದು ಯೋಚಿಸುವದಕ್ಕಿಂತ, ಇದನ್ನು ತಪ್ಪಾಗಿ ಗ್ರಹಿಸಿರಬಹುದು.

ಈ ವೇದಭಾಗದಲ್ಲಿ, ವಿಮೋಚನಕಾಂಡ 12:46 ಮತ್ತು ಯೋಹಾನ 19:36ರಲ್ಲಿ ಉಲ್ಲೇಖಿಸಿದಂತೆ, ಬಹಳ ಮಟ್ಟಿಗೆ ಕರ್ತನನ್ನು ಪಸ್ಕದ ಕುರಿಮರಿ ಎಂದು ಆಲೋಚಿಸಿರಬಹುದು. NIV ಮತ್ತು NRSV 5.7ರ "ಕುರಿಮರಿ" ಎಂಬುದರ ಸರಿಯಾದ ಅನುವಾದವನ್ನು ಒದಗಿಸುತ್ತದೆ.

**ವಚನ 8.** ಅಪೊಸ್ತಲನು ಪಸ್ಕ ಹಬ್ಬವನ್ನು ಉಲ್ಲೇಖಿಸುತ್ತಿರಬಹುದು. ಹಬ್ಬವು ಸಂತೋಷ ಮತ್ತು ಆಚರಣೆಯ ಸಮಯ, ಈ ಸಮಯ ಯೆಹೂದ್ಯ ಸಮುದಾಯ, ಅದನ್ನು ಆರಂಭಿಸಿದ ಜನರು ಎಂದು ಪ್ರತಿಬಿಂಬಿಸುತ್ತದೆ. ಪೌಲನ ಮೊದಲನೆಯ ಓದುಗರು ಇಲ್ಲಿ ಅತೀಶಯವಾದ ವ್ಯತ್ಯಾಸವನ್ನು ಗುರುತಿಸಿದರು: ವಿಶ್ವಾಸಿಗಳ ಸಮೂಹ ಈ ಹಬ್ಬದ ಗುಣಲಕ್ಷಣವನ್ನು ತೋರಿಸುವ ದುಷ್ಟತನದಲ್ಲಿ ಸ್ವಯಂ-ತೊಡಿಗಿಸಿಕೊಂಡಿತು, ವಿಗ್ರಹಾರಾಧಕರಿಗೆ ಅವರನ್ನು ಗೌರವಿಸುವ ಮಧ್ಯೋತ್ಸವದ ಹಬ್ಬದಂತಿತ್ತು, ಇದೇ ವಿಧದ ವ್ಯತ್ಯಾಸವು ಇಂದು ನಮ್ಮ ಲೋಕದಲ್ಲಿ ಸಹ ಕಂಡುಬರುತ್ತದೆ, ಕ್ರೈಸ್ತರ ಒಳ್ಳೇತನವನ್ನು ಬೀದಿ ಜಗಳದ ಹಿಂದಿರುವ ಕಟುಮತ್ಸರವನ್ನು ಕ್ರೈಸ್ತರು ಅನ್ಯೋನ್ಯಭೋಜನಕ್ಕೆ ಹೋಲಿಸಲಾಗಿದೆ. **ಹಬ್ಬವನ್ನು ಆಚರಿಸುವದು** ಎಂದರೆ ಸಭೆ ಅದರ ಸಮೂಹದಲ್ಲಿ, ಅದರ ಆರಾಧನೆಯಲ್ಲಿ ಮತ್ತು ಅದರ ಜೀವಿತದಲ್ಲಿ ಭಾಗತೆಗೆದುಕೊಳ್ಳುವದಾಗಿದೆ. ಆಚರಣೆಗೆ ಮೂಲ ಸ್ಥಾನಿಕ ಸಭೆಯಲ್ಲಿರುವ ಐಕ್ಯತೆ, ಸಾಮಾನ್ಯ ಅರಿಕೆ, ಪರಿಶುದ್ಧತೆಗೆ ಸಮರ್ಪಣೆ, ನಿರೀಕ್ಷೆ ಮತ್ತು ಅನ್ಯೋನ್ಯತೆಯಲ್ಲಿ ಇದು ಸಾಕ್ಷಿಯಾಗಿದೆ.

ಪಸ್ಕದ ಕಾಲದಲ್ಲಿ ಹುಳಿಯಿಲ್ಲದ ರೊಟ್ಟಿ ಕ್ರೈಸ್ತರು ಮತ್ತು ವಿಗ್ರಹಾರಾಧಕರ ಆಚರಣೆಯ ವ್ಯತ್ಯಾಸದಲ್ಲಿ ಬೆಳಕನ್ನು ಚೆಲ್ಲುತ್ತದೆ. **ಹಳೇ ಹುಳಿಯನ್ನು ಅಂದರೆ ದುರ್ಮಾರ್ಗತ್ವ ದುಷ್ಟತ್ವ ಎಂಬ ಹುಳಿಯನ್ನು ಇಟ್ಟುಕೊಳ್ಳದೆ ಸರಳತೆ ಸತ್ಯತೆ ಎಂಬ ಹುಳಿಯಿಲ್ಲದ ರೊಟ್ಟಿ** ರೂಪಕಾಲಂಕಾರವಾಗಿದೆ. ತನ್ನ ತಂದೆಯ ಹೆಂಡತಿಯೊಂದಿಗೆ ಜೀವಿಸುತ್ತಿರುವ ಮನುಷ್ಯನು ಮೊದಲಿನ ಭ್ರಷ್ಟ ಜೀವಿತದ ಮಾರ್ಗದೊಂದಿಗೆ ಸಹ ಸರಿಹೊಂದುತ್ತಿಲ್ಲ, ಮತ್ತು ಇದು ಹುಳಿಯಿಲ್ಲದ ರೊಟ್ಟಿಯ ಹೊಸ ಜೀವಿತದ ವಿಧಾನಗಳಿಗೆ ಯೋಚಿಸಲು ಅಸಾಧ್ಯವಾಗಿದೆ. "ಹುಳಿಯ" ಅಪಾಯ ಮತ್ತು "ಹಬ್ಬವನ್ನು ಆಚರಿಸುವ ವಿಚಾರ" ಸೇರಿಬಂದ ಸಭೆಗೆ ಅನ್ವಯಿಸುತ್ತದೆ. ಕ್ರೈಸ್ತರನ್ನು ಸಮುದಾಯವಾಗಿ ಹಿಡಿದಿರುವ ಸಿಮೆಂಟ ಎಂದರೆ ಕ್ರಮವಾಗಿ ಕೂಡಿಬರುವದು. ಪೌಲನು ಈ ಸಮಯಗಳನ್ನು ವ್ಯಾಕ್ಯಾಂಗದಲ್ಲಿ ಉಲ್ಲೇಖಿಸಿದ್ದಾನೆ "ಒಟ್ಟುಗೂಡಿ ಬರುವಾಗ" (5:4), "ನೀವು ಕೂಡಿ ಬರುವಾಗ" (11:18) ಮತ್ತು "ಸಭೆಯೆಲ್ಲಾ ಕೂಡಿಬರುವಾಗ" (14:23).

ಹುಳಿಯಿಲ್ಲದ ರೊಟ್ಟಿಯಾದ "ಪ್ರಾಮಾಣಿಕತೆ ಮತ್ತು ಸತ್ಯ," ಸಮೂಹದ "ಹಬ್ಬ" ಆಚರಿಸುವದನ್ನು ಒಟ್ಟಾಗಿ ಸೇರಿಸಿ, ಬಹುಶಃ ಪೌಲನ ಮತ್ತು ಆತನ ಒದುಗರ ಮನಸ್ಸಿನಲ್ಲಿ ಕರ್ತನ ಭೋಜನವನ್ನು ಜ್ಞಾಪಕ್ಕೆ ತಂದಿರಬಹುದು. "ಹಬ್ಬವನ್ನು" ಆಚರಿಸುವದರಿಂದ ಬಂದ ದೈವೀಕ ಜೀವಿತದ ಶೈಲಿಯನ್ನು, ವಿಗ್ರಹಾರಾಧಕರು ಧಾರ್ಮಿಕ ಹಬ್ಬಗಳನ್ನು ಆಚರಿಸುವ ಹಲವು ನಡತೆಯೊಂದಿಗೆ ಅಪೊಸ್ತಲನು ವ್ಯತ್ಯಾಸವನ್ನು ತೋರಿಸುವ ಉದ್ದೇಶಹೊಂದಿರಬಹುದು. ಪ್ರಾಚೀನ ಲೇಖಕರು ದೇವರುಗಳನ್ನು ಗೌರವಿಸುವ[4] ಹಬ್ಬದೊಂದಿಗೆ ಸಂಬಂಧ ಹೊಂದಿರುವ ಜಾರತ್ವದ ಕುರಿತು ಬರೆದಿದ್ದಾರೆ. "ನಮ್ಮ ಹಬ್ಬ" ಮತ್ತು "ಅವರ ಹಬ್ಬಗಳ" ಮಧ್ಯದಲ್ಲಿರುವ ವ್ಯತ್ಯಾಸ ಪೌಲನಿಗೆ ಸಹೋದರರು ದೈವೀಕ ಜನರಾಗಿರಬೇಕು ಎಂದು ಕ್ರೈಸ್ತ ಹಬ್ಬವು ತನ್ನ ಹಿಂಬಾಲಕರಿಗೆ ನೀಡುತ್ತದೆ ಎಂದು ಸವಾಲನ್ನು ನೀಡುವದಕ್ಕೆ ಇದು ಉತ್ತಮ ಉದಾಹರಣೆ ಆಗಿದೆ. ಕರ್ತನ ಭೋಜನದಲ್ಲಿ ಹುಳಿಯಿಲ್ಲದ ರೊಟ್ಟಿಯ ಉಪಯೋಗ ಈ ವೇದಭಾಗದಲ್ಲಿ ಉಲ್ಲೇಖಿಸಲಾಗಿದೆ. ಹೊಸ ಒಡಂಬಡಿಕೆಯಲ್ಲಿ ಕರ್ತನ ಭೋಜನದಲ್ಲಿ ಹುಳಿಯಿಲ್ಲದ ರೊಟ್ಟಿಯನ್ನು ಉಪಯೋಗಿಸುವದರ ಕುರಿತು ಎಲ್ಲಿಯೂ ನೇರವಾಗಿ ಉಲ್ಲೇಖಿಸಲಾಗಿಲ್ಲ. ಹ್ಯಾಗೂ, ಯೇಸು ಪಸ್ಕದ ಸಮಯದಲ್ಲಿ ಯೇಸು ಈ ಸಂಸ್ಕಾರವನ್ನು ಸ್ಥಾಪಿಸಿದನು, ಆ ಸಮಯದಲ್ಲಿ ಯೆಹೂದ್ಯರು ಕೇವಲ ಹುಳಿಯಿಲ್ಲದ ರೊಟ್ಟಿಯನ್ನು ಮಾತ್ರ ಉಪಯೋಗಿಸುತ್ತಿದ್ದರು (ವಿಮೋಚನಕಾಂಡ 12:8).

## ಸೂಚನೆಗಳನ್ನು ಸ್ಪಷ್ಟೀಕರಿಸುವದು (5:9-13)

ತನ್ನ ತಂದೆಯ ಹೆಂಡತಿಯೊಂದಿಗೆ ಜೀವಿಸುತ್ತಿರುವ ಮನುಷ್ಯನ ಕುರಿತು ಕೊರಿಂಥದಲ್ಲಿರುವ ಕ್ರೈಸ್ತರನ್ನು ಖಂಡಿಸುವ ಮತ್ತು ಎಚ್ಚರಿಸುವ ಪಥದಲ್ಲಿ, ಪೌಲನು ಹಿಂದಿನ ಪತ್ರದಲ್ಲಿ ಅವರಿಗೆ ಬರೆದಿದ್ದನು. ಅವನು ಅದರಲ್ಲಿ ಚರ್ಚಿಸಿದ್ದ ವಿಷಯವನ್ನು ಅವರು ಸಹಜವಾಗಿ, ತಪ್ಪಾಗಿ ತಿಳಿದಿದ್ದರು. ಅವರ ತಪ್ಪಾದ ಅಭಿಪ್ರಾಯ ಸಧ್ಯದಲ್ಲಿ ಅವರಿಗಿರುವ ಸನ್ನಿವೇಶಕ್ಕೆ ಸಂಬಂಧಿಸಿದ್ದರಿಂದ, ಅಪೊಸ್ತಲನು ತನ್ನ ಎಚ್ಚರಿಕೆಯ ಕುರಿತು ವಿವರಿಸಿದನು. ತನ್ನ ಹಿಂದಿನ ಪತ್ರವು ಅವನ ಪ್ರಸ್ತುತ ಆಜ್ಞೆಯೊಂದಿಗೆ ಸ್ಥಿರವಾಗಿದೆ ಅದೇನಂದರೆ ಸಭೆಯು

ತನ್ನ ಸದಸ್ಯರ ಮಧ್ಯದಲ್ಲಿರುವ ಅನ್ಯತಿತಿಕತೆಯನ್ನು ಸಹಿಸಬಾರದು ಎಂಬುದೇ.

**[9]ಜಾರರ ಸಹವಾಸ ಮಾಡಬಾರದೆಂದು ನನ್ನ ಪತ್ರಿಕೆಯಲ್ಲಿ ಬರೆದಿದದ್ದೆನಷ್ಟೆ, [10]ಈ ಲೋಕದಲ್ಲಿರುವ ಜಾರರು, ಲೋಭಿಗಳು, ಸುಲುಕೊಳ್ಳುವವರು, ವಿಗ್ರಹಾರಧಕರು ಇವರ ಸಹವಾಸವನ್ನು ಬಿಟ್ಟುಬಿಡಬೇಕೆಂದು ನನ್ನ ತಾತ್ಪರ್ಯವಲ್ಲ; ಹಾಗೆ ಬಿಡಬೇಕಾದರೆ ನೀವು ಈ ಲೋಕವನ್ನೇ ಬಿಟ್ಟುಹೋಗಬೇಕಾಗುವದು. [11]ಆದರೆ ಕ್ರೈಸ್ತ ಸಹೋದರನೆ ನಿಸಿಕೊಂಡವನು ಜಾರನಾದರು ಲೋಭಿಯಾದರೂ ವಿಗ್ರಹಾರಾಧಕ ನಾದರೂ ಬೈಯುವವನಾದರೂ ಕುಡಿಕನಾದರೂ ಸುಲು ಕೊಳ್ಳುವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟಮಾಡಲೂ ಬಾರದು ಎಂದು ಬರೆದಿದ್ದೆನು. [12]ಹೊರಗಿನವರನ್ನು ಕುರಿತು ತೀರ್ಪುಮಾಡುವದಕ್ಕೆ ನನಗೇನಧೀಕಾರ? ಒಳಗಿನವರನ್ನು ಕುರಿತು ತೀರ್ಪುಮಾಡುವವರು ನೀವು ಅಲ್ಲವೇ? [13]ಹೊರಗಿನವರನ್ನು ಕುರಿತು ತೀರ್ಪು ಮಾಡುವವನು ದೇವರು. ಆ ದುಷ್ಟನನ್ನು ನಿಮ್ಮ ಮಧ್ಯದಿಂದ ತೆಗೆದುಹಾಕಬೇಕು.**

**ವಚನ 9.** ಪೌಲನು ಬರೆದ ಮೊದಲಿನ ಪತ್ರಗಳನ್ನು ನಮಗಾಗಿ ಕಾಯ್ದಿರಿಸಿ ಹೊಸ ಒಡಂಬಡಿಕೆಯಲ್ಲಿ ಉಲ್ಲೇಖಿಸಲಾಗಿಲ್ಲಾ. ಕ್ರೈಸ್ತರು ಅದರ ಕುರಿತು ಇಲ್ಲಿ ಹೇಳಿದ ಸಂಕ್ಷಿಪ್ತ ಉಲ್ಲೇಖವನ್ನು ಬಿಟ್ಟರೆ ಹೆಚ್ಚಿನದೇನನ್ನೂ ಅರಿತಿಲ್ಲ. ಬಹುಶಃ, ಪೌಲ ಅದನ್ನು ಎಫೆಸದಿಂದ ಬರೆದಿರಬಹುದು. ಹಾಗಿರುವದರಿಂದ, ಪತ್ರವನ್ನು "1 ಕೊರಿಂಥದವರಿಗೆ" ಎಂದು ಕರೆಯುವ ಪತ್ರವನ್ನು ಪೌಲನು ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಾಗಿ ಎಫೆಸೆಗೆ ಹೋಗಿ ಬಂದ ನಂತರ ಬರೆದಿರಬಹುದು. ಮೊದಲಿನ ಪತ್ರದಲ್ಲಿ, ಪೌಲನು ಕೊರಿಂಥದ ಕ್ರೈಸ್ತರನ್ನು ಲೈಗಿಂಕ ಅನೈತಿಕ ಕಾರ್ಯಗಳಲ್ಲಿ ಪರಸ್ಪರ ತೊಡಗಿಸಿಕೊಳ್ಳಬಾರದೆಂದು ಬೇಡಿಕೊಳ್ಳುತ್ತಾನೆ, ಇದರ ಅರ್ಥ ಅವರು ಇಂಥಹ ವರ್ತನೆಯನ್ನು ಹಗುರವಾಗಿ ಪರಿಗಣಿಸಬಾರದು. ಅವರು ಪಾಪವನ್ನು ಸಣ್ಣ ಸಂಗತಿ ಎಂದು ಪರಿಗಣಿಸಬರದು. ತನ್ನ ಮೊದಲಿನ ಎರಡೂ ಪತ್ರಗಳಲ್ಲಿ ಮತ್ತು 1 ಕೊರಿಂಥದವರೆಗೆ ಬರೆದ ಪತ್ರದಲ್ಲಿ, ಪೌಲನು ದೇವರ ರಾಜ್ಯದ ಮೇರೆಗಳ ಕುರಿತು ಕಳಕಳಿಯುಳ್ಳವನಾಗಿದ್ದಾನೆ. ಸಭೆಯು ಅನ್ಯೋನ್ಯತೆಯನ್ನು ವಿಸ್ತರಿಸುವಾಗ, ಇದರ ಅರ್ಥ ಅದು ತನ್ನ ಸಮ್ಮತಿಯನ್ನು ವಿಸ್ತರಿಸುತ್ತದೆ, ತನ್ನ ಒಪ್ಪಿಗೆಯನ್ನು ಸಹ. ಸಭೆಯು ಕ್ರಿಸ್ತನ ದೇಹವಾಗಿದೆ. ಅದು ಯಾವುದಕ್ಕೆ ಸಮ್ಮತಿಯನ್ನು ನೀಡುತ್ತದೋ ಅದು ಕ್ರಿಸ್ತನ ಸಮ್ಮತಿಗೆ ಸೂಚಕವಾಗಿರುತ್ತದೆ. ಸಭೆಯ ಮೇರೆಗಳು ಅದರ ನಂಬಿಕೆಯ ಅರಿಕೆಯ ಮತ್ತು ಅದನ್ನು ಅನುಸರಿಸುವ ಜೀವಿತದ ಮೂಲಕ ವ್ಯಾಖ್ಯಾನಿಸಲಾಗುತ್ತದೆ. ವಿಶ್ವಾಸಿಗಳು ಸ್ವತಂತ್ರವಾಗಿ **ಜಾರರ ಸಹವಾಸವನ್ನು ಹೊಂದಿಕೊಳ್ಳುವಾಗ**, ಗುಂಪು ಕ್ರಿಸ್ತನಿಗೆ ಸಂಬಂಧಿಸಿದ ಸಭೆಯಾಗಿರುವದಿಲ್ಲ.

ಅಪೊಸ್ತಲನ ಹಿಂದಿನ ಪತ್ರದ ಉಲ್ಲೇಖ ಪ್ರೇರೆಪಣೆ ಮತ್ತು ಸತ್ಯವೇದದಲ್ಲಿ ಸೇರಿಸಲಾದ ಪುಸ್ತಕಗಳ ಪಟ್ಟಿಯ ಕುರಿತು ಪ್ರಶ್ನೆಯನ್ನು ತರುತ್ತದೆ. ಅಪೊಸ್ತಲನು ಬರೆದ ಎಲ್ಲಾ ಸಂಗತಿಗಳು ಪವಿತ್ರಾತ್ಮನ ಪ್ರೇರೆಣೆಯಿಂದ ಬರೆದವುಗಳಾಗಿವೆಯೋ? ಯಾಕೆ ಅವನ ಕೆಲವು ಪತ್ರಗಳನ್ನು ಹೊಸ ಒಡಂಬಡಿಕೆಯಲ್ಲಿ ಸೇರಿಸಲಾಗಿದೆ, ಆದರೆ ಎಲ್ಲವನ್ನೂ ಯಾಕಿಲ್ಲ? ಯಾರೊಬ್ಬರೂ ಎಲ್ಲಾ ಪ್ರಶ್ನೆಗೆಳಿಗೆ ಖಂಡಿತವಾದ ಉತ್ತರವನ್ನು ನೀಡಲು ಸಾಧ್ಯವಿಲ್ಲದೇ ಇರುವಾಗ, ಕೆಲವು ಸಂಗತಿಗಳು ಸ್ಪಷ್ಟವಾಗಿವೆ: (1) ಪೇತ್ರ, ಪೌಲ, ಲೂಕ,

ಯೋಹಾನ ಮತ್ತು ಇತರ ಹೊಸ ಒಡಂಬಡಿಕೆಯ ಲೇಖಕರು ಬಹಳ ಮಟ್ಟಿಗೆ ಅನೇಕ ಸಂಗತಿಗಳನ್ನು ಬರೆದಿದ್ದಾರೆ ಅವೆಲ್ಲವುಗಳೂ ವೇದವಾಕ್ಯದ ಭಾಗವಾಗಿಲ್ಲ. (2) ಪವಿತ್ರಾತ್ಮನು ಕ್ರಿಸ್ತನ ಅಪೊಸ್ತಲರನ್ನು ಮತ್ತು ಪ್ರೇರೆಪಣೆ ಹೊಂದಿದ ಇತರ ಮನುಷ್ಯರನ್ನು ಅವರ ಮಾತುಗಳಲ್ಲಿ ಮತ್ತು ಬರವಣಿಗೆಯ ಪದಗಳಲ್ಲಿ ಪ್ರೇರೆಪಣೆಯನ್ನು ನೀಡಿದ್ದಾನೆ. ಪೌಲನು ತನ್ನ ಮೊದಲಿನ ಪತ್ರಗಳಿಗೆ ಬೇಡಿಕೆಯನ್ನು ನೀಡಿಲ್ಲ ಯಾಕಂದರೆ ಅವು ಆತನ ಪ್ರಸ್ತುತ ಪತ್ರಗಳಷ್ಟೇ ಅಧಿಕಾರಯುತವಾಗಿವೆ. (3) ಹೊಸ ಒಡಂಬಡಿಕೆಯ ರಚನೆಯಲ್ಲಿ ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ಆತನು ಇಚ್ಛಿಸಿದಂತೆ ಇಂಥಹ ಪುಸ್ತಕಗಳನ್ನು ಸೇರಿಸಿಕೊಳ್ಳಲಾಗಿದೆ. ಕ್ರೈಸ್ತರ ನಂಬಿಕೆ ಪವಿತ್ರಾತ್ಮನು ಹೊಸ ಒಡಂಬಡಿಕೆಯನ್ನು ಸಿದ್ಧಪಡಿಸುವ ವಿವಿಧ ದಾಖಲೆಗಳನ್ನು ಕೇವಲ ಪ್ರೇರೆಪಿಸಿರುವದು ಮಾತ್ರವಲ್ಲ, ಸಭೆಯಲ್ಲಿ ಮತ್ತು ಸಭೆಯ ಮೂಲಕ ಇಂಥಹ ದಾಖಲೆಗಳನ್ನು ವಿಶ್ವಾಸಿಗಳ ಮಾರ್ಗದರ್ಶನಕ್ಕಾಗಿ ಮುಂದಿನ ಕಾಲಕ್ಕಾಗಿ ಕಾಯ್ದಿದಿರಸಬೇಕು ಎಂಬ ಪ್ರೇರೆಪಣೆಯನ್ನು ಸಹ ನೀಡಿದೆ. (4) ಸತ್ಯವೇದದ ಪುಸ್ತಕಗಳ ಪಟ್ಟಿಯನ್ನು ಪೂರ್ತಿಗೊಳಿಸಲಾಗಿದೆ. ಇಂದು ದಾಖಲೆಗಳ ಹೊರನೋಟ ಪೌಲ ಅಥವಾ ಯೋಹಾನರಿಂದ ಬರೆಯಲ್ಪಟ್ಟವು ಎಂದು ಗುರುತಿಸುವಾಗ ಅವುಗಳನ್ನು ಹೊಸ ಒಡಂಬಡಿಕೆಯ ಭಾಗವಾಗಿ ಕಾಣುವ ಅಗತ್ಯತೆಯಿಲ್ಲ. ಪವಿತ್ರಾತ್ಮನು ಈಗಾಗಲೇ ಸತ್ಯವೇದದ ಪುಸ್ತಕಗಳ ಪಟ್ಟಿಯನ್ನು ನಿರ್ಧರಿಸುವ ತನ್ನ ಕಾರ್ಯವನ್ನು ಮುಕ್ತಾಯಗೊಳಿಸಿದ್ದಾನೆ.

**ವಚನ 10.** ನೈತಿಕ ಪರಿಶುದ್ಧತೆಗಾಗಿ ಕರೆ ಲೋಕದಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿಕೊಳ್ಳುವ ಕರೆ ಎಂದು ಅರ್ಥೈಸಲಾಗಿದೆ. ಬಹುಶಃ ಪೌಲನ ವೈರಿಗಳು ಅವನ ಎಚ್ಚರಿಕೆಗಳು ಜೀವಿತದ ಅಪ್ರಾಯೋಗಿಕ ಅನುಸಂದಾನದ ಬೇಡಿಕೆಯನ್ನು ಹೊಂದಿದ್ದವು ಎಂಬುದಕ್ಕೆ ಸಾಕ್ಷಿಯಾಗಿವೆ ಎಂದು ನಿವೇದಿಸುತ್ತಾರೆ. ಅಪೊಸ್ತಲನು 5:9-13ರರಲ್ಲಿ ತನ್ನ ಆಜ್ಞೆಯನ್ನು ಸ್ಪಷ್ಟೀಕರಿಸಿದ್ದಾನೆ.

ಕ್ರೈಸ್ತರು **ಈ ಲೋಕದಲ್ಲಿರುವ ಜಾರರ** ಎಲ್ಲಾ ಸಂಪರ್ಕವನ್ನು ದೂರವಿರಿಸಲು ಸಾಧ್ಯವಿಲ್ಲ ಎಂದು ಅವನು ಹೇಳುತ್ತಾನೆ. ಇಂಥಹ ದೂರವಿರಿಸುವಿಕೆಗೆ ಅವನು ಲೋಕದಿಂದ ಹೊರಗೆ ಹೋಗುವದು ಅವಶ್ಯವಾಗಿದೆ. ಹಾಗೂ, ಕ್ರೈಸ್ತರು ತಾವು ಸಮರ್ಥಿಸಿಕೊಳ್ಳುವ ವರ್ತನೆಯ ವಿಧದ ಕುರಿತು ಏನಾದರು ಹೇಳುವದಕ್ಕಿದೆ ಅಥವಾ ಕನಿಷ್ಠಪಕ್ಷ ಕರ್ತನ ದೇಹದ ಒಳಗೆ ಸಹನೆಯನ್ನು. ಇದರಿಂದಾಗಿ ಆತನ ಓದುಗರು ಲೈಂಗಿಕ ಅನೈತಿಕತೆ ಇತರ ಪಾಪಗಳಿಗಿಂತ ಭಿನ್ನವಾದ ಒಂದು ಕ್ರಮವಾಗಿದೆ ಎಂದು ತಿಳಿದುಕೊಳ್ಳಬಾರದು, ಅಪೊಸ್ತಲನು **ಲೋಭಿಗಳು, ಮೋಸಗಾರರು ಮತ್ತು ವಿಗ್ರಹಾರಾದಕರನ್ನು** ಪಟ್ಟಿಯಲ್ಲಿ ಸೇರಿಸಿದ್ದಾನೆ. ಅವನು ಎಣಿಸದ ಪಾಪಗಳು ತಂದೆಯ ಹೆಂಡತಿಯೊಂದಿಗೆ ಜೀವಿಸುವ ಪುರುಷನೊಂದಿಗೆ ನೇರವಾದ ಸಂಬಂಧವನ್ನು ಹೊಂದಿಲ್ಲವೆಂದು ತೋರುತ್ತದೆ.

ಸಮಯದುದ್ದಕ್ಕೂ ಹಟದ ಧ್ವನಿಯು ಕ್ರೈಸ್ತರು ತಮ್ಮನ್ನು ತಾವು ಸಭೆಯ ಸಮುದಾಯದಲ್ಲಿ ಪ್ರತ್ಯೇಕಿಸಿಕೊಳ್ಳಲು ತಮಗೆ ಸಾಧ್ಯವಾದಷ್ಟು ಮಾಡಬೇಕೆಂದು, ಲೋಕದಿಂದ ಪ್ರತ್ಯೇಕಿಸಿಕೊಳ್ಳುವದರ ಮೂಲಕ ಪರಿಶುದ್ಧತೆಯು ಆಳ್ವಿಕೆಯನ್ನು ಹೊಂದಿಕೊಳ್ಳುವಂತೆ ಬೇಡಿಕೊಳ್ಳಲಾಗಿದೆ. ಈ ಅಭಿಪ್ರಾಯಕ್ಕೆ ಪ್ರತ್ಯುತ್ತರವನ್ನ ನಾವು

ಸನ್ಯಾಸಾಶ್ರಮದಲ್ಲಿ ಮತ್ತು ಸನ್ಯಾಸಿನಿಯರ ಆಶ್ರಮದಲ್ಲಿ ಕಾಣಬಹುದು. ಯೇಸು ತನ್ನ ಹಿಂಬಾಲಕರಿಗೆ ಪ್ರತ್ಯೇಕಿಸಿಕೊಳ್ಳುವದಕ್ಕಿಂತ ಹೆಚ್ಚು ಕಠಿಣವಾದ ಕಾರ್ಯವನ್ನು ನೀಡಿದ್ದಾನೆ. ಆತನು ಅವರಿಗೆ ಲೋಕದ ಒಳಕ್ಕೆ ಹೊರಟು ಹೋಗಿರಿ ಮತ್ತು ಪಾಪಿಗಳಿಗೆ ಬೋಧಿಸಿರಿ, ಮತ್ತು ತಮ್ಮ ಸ್ವಂತ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವದರ ಮೂಲಕ ಅವರಿಗೆ ನಂಬಿಕೆ ಮತ್ತು ಒಳ್ಳೇತನದ ಪ್ರಭಾವವನ್ನು ಬೀರಿರಿ ಎಂದು ಹೇಳಿದ್ದಾನೆ. ಸಭೆಯು ತನ್ನನ್ನು ತಾನು ನಾಲ್ಕು ಗೋಡೆಗಳ ಹಿಂದೆ ಅಡಗಿಸಿಕೊಳ್ಳುವದರ ಮೂಲಕ ಲೌಕಿಕತೆಯಿಂದ ಪ್ರತ್ಯೇಕಿಸಿಕೊಂಡಿಲ್ಲ. ಪಾತಾಳಲೋಕದ ಬಲವು ಹೋರಾಡುತ್ತಿರುವ ದೇವರ ಸಭೆಯನ್ನು ಅದು ಸೋಲಿಸಲಾರದು (ಮತ್ತಾಯ 16:18). ದೇವರನ್ನು ಅರಿಯದೇ ಇರುವವರಿಂದ ಕ್ರೈಸ್ತರು ತಪ್ಪಿಸಿಕೊಳ್ಳಲು ಪ್ರಯತ್ನಿಸಬಾರದು; ನಾವು ಪಾಪಕ್ಕೆ ದಾಸರಾಗಿರುವವರನ್ನು ಎದುರಿಸಬೇಕು ಮತ್ತು ಅವರನ್ನು ಸ್ವತಂತ್ರ ಮತ್ತು ಜೀವದ ಮಾರ್ಗಕ್ಕೆ ನಡೆಸಬೇಕು.

**ವಚನ 11.** ತನ್ನ ಹಿಂದಿನ ಪತ್ರದಲ್ಲಿ, ಪೌಲನು ವಿಶ್ವಾಸಿಗಳಿಗೆ ಲೋಕದಲ್ಲಿ ಅವಶ್ಯವಿರುವ ಸವಂಹನದ ಕುರಿತು ಸೂಚನೆಗಳನ್ನು ಸೇರಿಸಿಲ್ಲ. ಯೇಸು ಇದನ್ನು ತನ್ನ ಸ್ವಂತ ಬೋಧನೆಗಳಲ್ಲಿ ಮಾಡಿದ್ದಾನೆ: ಅವರು ಎಲ್ಲೆಲ್ಲಿ ವಾಸಿಸಿದರೋ, ಆತನ ಶಿಷ್ಯರು ಕುರುಡರಾಗಿರುವ ಜನರಿಗೆ ಬೆಳಕಾಗಿ ಇರುವದಕ್ಕಾಗಿ ಕರೆಯಲ್ಪಟ್ಟಿದ್ದಾರೆ ಗುಡ್ಡದ ಮೇಲೆ ಕಟ್ಟಿದ ಪಟ್ಟಣದಂತೆ (ಮತ್ತಾಯ 5:14). ಪೌಲನ ಮೊದಲಿನ ಪತ್ರ ಅವಿಶ್ವಾಸಿಗಳಿಗೆ ಸಂಬೋಧಿಸಲಾಗಿಲ್ಲ. ಬದಲಾಗಿ, ಅವನು ಕೊರಿಂಥದಲ್ಲಿರುವ ಕ್ರೈಸ್ತರನ್ನು, **ಆದರೆ ಸಹೋದರ ನೆನಿಸಿಕೊಂಡವನು ಜಾರನಾದರೂ . . . ಆಗಿದ್ದ ಪಕ್ಷದಲ್ಲಿ ಅಂಥವನ ಸಹವಾಸ ಮಾಡಬಾರದು** ಎಂದು ಉಪದೇಶಿಸಿದನು. ಅವನು ಹಿಂದೆ ಮಾಡಿದಂತೆ, ಪೌಲನು **ಲೋಭಿಯಾದರೂ ವಿಗ್ರಹಾರಾಧಕನಾದರೂ ಬೈಯುವವನಾದರೂ ಕುಡುಕನಾದರೂ ಸುಲುಕೊಳ್ಳುವವನಾದರೂ** ಈ ಪಟ್ಟಿಯಲ್ಲಿ ಸೇರಿಸಿ ಅನೈತಿಕರ ಶ್ರೇಣಿಯನ್ನು ವಿಸ್ತರಿಸುತ್ತಾನೆ. ನಂಬಿಗಸ್ತ ಕ್ರೈಸ್ತನು ಈ ಪಾಪಗಳ ಅಪರಾಧೀ ಮನೋಭಾವವನ್ನು ಹೊಂದಿದ "ಸಹೋದರ" ನೊಂದಿಗೆ ಊಟವನ್ನು ಸಹ ಮಾಡಬಾರದು.

ಪೌಲನ ಸೂಚನೆಗಳು ಯೇಸುವಿನ ವಿರೋಧವಾಗಿ ಆತನ ವೈರಿಗಳು ಮಾಡಿದ ಆರೋಪಗಳ ವಿರುಧ ಪ್ರಶ್ನೆಯನ್ನು ಎಬ್ಬಿಸುತ್ತವೆ. "ನಿಮ್ಮ ಗುರುವು ಏಕೆ ಸುಂಕದವರೊಂದಿಗೆ ಮತ್ತು ಪಾಪಿಗಳೊಂದಿಗೆ ಊಟಮಾಡುತ್ತಾನೆ?" (ಮತ್ತಾಯ 9:11). ಯೇಸುವಿನೊಂದಿಗೆ ಊಟದ ಮೇಜಿನ ಮುಂದೆ ಕುಳಿತ ಪಾಪಿಗಳು ದೇವರ ಜನರಾಗುವದಕ್ಕೆ ಅವಕಾಶವನ್ನು ಹೊಂದಿರಲಿಲ್ಲವೋ, ಅದರಂತೆ ಕೊರಿಂಥದಲ್ಲಿರುವ ಕೆಲವು ಸಹೋದರರು ಕ್ರೈಸ್ತರಾಗುವಾಗ ತಮ್ಮ ಅನೈತಿಕತೆಯಿಂದ ತಿರುಗಿಕೊಂಡರಲ್ಲವೋ? ಯೇಸು ಅವರ ಜೀವನದ ರೀತಿಯನ್ನು ಪ್ರೋತ್ಸಾಹಿಸಿದನೋ? ಒಬ್ಬ ಕ್ರೈಸ್ತನಿಗೆ ಸಾಮಾಜಿಕವಾಗಿ ತನ್ನನ್ನು ತಾನು ವಿಶ್ವಾಸಿ ಎಂದು ಹೇಳಿಕೊಳ್ಳುವ. ಆದಾಗ್ಯೂ ದೇವರ ಚಿತ್ತದ ಮೇಲೆ ಅವಲಂಬಿಸಿರುವ ಕ್ರೈಸ್ತರ ಉದ್ದೇಶಗಳಿಗೆ ಮುಕ್ತವಾಗಿ ಅಗೌರವವನ್ನು ತೋರಿಸುವವನೊಂದಿಗೆ ಸಂಬಂಧವನ್ನು ಇರಿಸುವದು ಸರಿಯೋ ಅಥವಾ ತಪ್ಪೋ. ಒಬ್ಬನ ಉದ್ದೇಶವು ಪಾಪಿಯನ್ನು ದೇವರ ಪ್ರೀತಿಯ ಸಂದೇಶದೊಂದಿಗೆ ತಲುಪುಲು ಮತ್ತು ಪಶ್ಚಾತ್ತಾಪಪಡಲು ಬೇಡಿಕೊಳ್ಳುವದು ಆಗಿರುವಾಗ, "ಅಂಥವನೊಂದಿಗೆ ಊಟಮಾಡುವದು" ದೇವರ ಮಹಿಮೆಗಾಗಿ ಆಗಿದೆ. ಹ್ಯಾಗೂ, ಒಂದು ಹಂತದಲ್ಲಿ, ಪಾಪದಲ್ಲಿ ಜೀವಿಸುತ್ತಿರುವ ಒಬ್ಬ ಮನುಷ್ಯನೊಂದಿಗೆ ಭೋಜನದಲ್ಲಿ

ಆನಂದಿಸುವದು ಪಾಪಿಯ ನಡತೆಯನ್ನು ಮನ್ನಿಸುತ್ತದೆ. ಕನಿಷ್ಠ, ಅವಿಶ್ವಾಸಿಗಳ ಮೇಲೆ ತಪ್ಪಾದ ಪ್ರಭಾವವನ್ನು ಬೀರುವದನ್ನು ತಪ್ಪಿಸುವದಾಗಿದೆ. ಇಲ್ಲವಾದಲ್ಲಿ ಅವರು ಕ್ರಿಸ್ತನ ಸುವಾರ್ತೆಯಿಂದ ಪ್ರಭಾವಿತರಾಗಿ ಇಂಥಹ ಜೀವಿತವನ್ನು ಗಂಭೀರವಾಗಿ ತೆಗೆದುಕೊಳ್ಳದೇ ಪರಿಶುದ್ಧ ಜೀವಿತದ ಕುರಿತು ಮಾತನಾಡುವ ಸಭೆಯಾಗಿ ನೇಮಿಸಲ್ಪಡುವದಾಗಿದೆ.

**ವಚನ 12.** ಪೌಲನು ಕೊರಿಂಥದ ಸಭೆಯು ಕ್ರೈಸ್ತರ ಸಂದೇಶವು ಕ್ರಿಸ್ತನಿಂದ ಹೊರಗಿರುವವರಿಗಾಗಿದೆ ಅವರು ಯೇಸುವನ್ನು ಕ್ರಿಸ್ತನೆಂದು, ದೇವರ ಮಗನೆಂದು ನಂಬುವದಕ್ಕಾಗಿದೆ; ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು; ಆತನಲ್ಲಿ ದೀಕ್ಷಾಸ್ನಾನ ಹೋಲಿಕ್ಕಾಗಿದೆ. ಅಲಂಕಾರಿಕವಾಗಿ ಅಪೊಸ್ತಲನು ಕೇಳುತ್ತಾನೆ, **ಹೊರಗಿನವರಿಗೆ ಸಹ ತೀರ್ಪು ಮಾಡುವದಕ್ಕೆ ನನಗೇನಿದೆ?** ಅವಿಶ್ವಾಸಿಗಳ ವಯಕ್ತಿಕ ಪಾಪಗಳಿಗೆ ತೀರ್ಪನ್ನು ನೀಡುವದು ಕ್ರೈಸ್ತರ ಕೆಲಸವಲ್ಲ. ಅವಿಶ್ವಾಸಿಗಳನ್ನು ಕುಡಿಕತನ ಅಥವಾ ಲೋಭಕ್ಕಾಗಿ ಆಕ್ರಮಣಮಾಡುವದಕ್ಕೆ ಬದಲಾಗಿ, ಯಾರನ್ನೋ ನೀತಿವಂತರಲ್ಲಿ ಎಂದು ಮನದಟ್ಟುಮಾಡುವದು ಕ್ರೈಸ್ತರ ಜವಾಬ್ದಾರಿಯಾಗಿದೆ. ಪ್ರತಿಯೊಬ್ಬ ಮನುಷ್ಯನಿಗೆ ಕ್ರಿಸ್ತನ ಕ್ರೂಜೆಯ ಮೂಲಕ ದೊರೆಯುವ ಕ್ಷಮಾಪಣೆ ಮತ್ತು ಕೃಪೆ ಅವಶ್ಯವಾಗಿದೆ. ಕರ್ತನರ ಎಲ್ಲಾ ಪಾಪಿಗಳನ್ನು ವಿಮೋಚನೆಯ ಮೇಜಿನ ಬಳಿಗೆ ಬರಲು ಆಮಂತ್ರಿಸುತ್ತಾನೆ.

**ಸಭೆಯ ಒಳಗಿರುವ ಕ್ರೈಸ್ತರಿಗೆ ತೀರ್ಪನ್ನು ನೀಡುವದು ಬೇರೆ ಸಂಗತಿಯಾಗಿದೆ.** ಇಂಥಹ ತೀರ್ಪು ಅವಶ್ಯವಾಗಿದೆ. ಕ್ರೈಸ್ತರಿಗೆ ಇತರ ಪ್ರತಿಯೊಬ್ಬರ ಪಾಪಗಳನ್ನು ಕಂಡುಹಿಡಿಯಲು ಸಹೋದರರನ್ನು ಗುರುತಿಸುವದು ಅಥವಾ ಗುಪ್ತಚಾರಿಕೆ ಮಾಡುವವರಿಗೆ ಕ್ಷಮೆಯಿಲ್ಲ. ಇತರ ಉದ್ದೇಶಗಳಿಗೆ ತೀರ್ಪನ್ನು ನೀಡಲು ನಮಗೆ ಪರವಾನಿಗೆಯನ್ನು ನೀಡಿಲ್ಲ (ಮತ್ತಾಯ 7:1, 2; ಯಾಕೋಬ 4:11). ಒಬ್ಬ ಸದಸ್ಯನು ಮಯಕ್ತವಾದ ಮತ್ತು ಪಶ್ಚಾತ್ತಾಪ ಪಡದೇ ಪಾಪದಲ್ಲಿ ಜೀವಿಸುವಾಗ, ಕ್ರೈಸ್ತರು ಒಂದಾಗಿ ಪಾಪಮಯ ನಡೆತೆಯನ್ನು ಖಂಡಿಸುವದು ಎಂಬ ಅರ್ಥವನ್ನು ನೀಡುತ್ತದೆ. ಯೂದನು ವಿಶ್ವಾಸಿಗಳನ್ನು ಎಚ್ಚರಿಸುತ್ತಾನೆ, “ಅವರನ್ನು ಬೆಂಕಿಯ ಬಾಯೊಳಗಿಂದ ಎಳಕೊಂಡು ರಕ್ಷಿಸಿರಿ. . .” (ಯೂದ 23).

**ವಚನ 13.** ಅವಿಶ್ವಾಸಿಗಳಿಗೆ ಕ್ರಿಸ್ತನನ್ನು ಪ್ರಕಟಿಸಿದ ನಂತರ ಮತ್ತು ಅವರನ್ನು ಕ್ರಿಸ್ತನಿಗೆ ವಿಧೇಯರಾಗಿರಿ ಎಂದು ಬೇಡಿಕೊಂಡ ನಂತರ, ಕ್ರೈಸ್ತರು ನ್ಯಾಯತೀರ್ಪನ್ನು ದೇವರ ಹಸ್ತದಲ್ಲಿ ಬಿಡಬೇಕು. ಅದೇ ಸಮಯದಲ್ಲಿ, ಮುಕ್ತವಾಗಿ ದೇವರ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ತಮ್ಮ ಮಧ್ಯದಲ್ಲಿರುವ ಯಾರನ್ನಾದರೂ ಸಭೆ ತಮ್ಮಿಂದ ದೂರವಿರಿಸಬೇಕು. ಅಪೊಸ್ತಲನು 5:13 ರರಲ್ಲಿರುವ ಈ ಸೂಚನೆಗೆ ಧರ್ಮೋಪದೇಶಕಾಂಡ 17:7 ರಲ್ಲಿರುವ ಈ ಉಲ್ಲೇಖದ ಮೂಲಕ ಒತ್ತನ್ನು ನೀಡಿದನು: **ಆ ದುಷ್ಟನನ್ನು ನಿಮ್ಮ ಮಧ್ಯದಿಂದ ಹೊರಗೆ ಹಾಕಿರಿ.**

ಈ ವಿಷಯದಲ್ಲಿ ಪೌಲನ ಮಾರ್ಗದರ್ಶನಕ್ಕೆ ವಿಧೇಯರಾಗುವದು ಕಷ್ಟ ಯಾಕಂದರೆ ಸಭೆಯು ತನ್ನ ಸದಸ್ಯರನ್ನು ಪೋಷಿಸಬೇಕು ಮತ್ತು ಪ್ರೋತ್ಸಾಹಿಸಬೇಕು, ಪಾಪಗಳು ಪಶ್ಚಾತ್ತಾಪ ಪಡುವಾಗ ಅವರನ್ನು ಕ್ಷಮಿಸಬೇಕು ಮತ್ತು ಅವರೊಂದಿಗೆ ಕರುಣೆ ಮತ್ತು ಅನುಕಂಪದಿಂದ ವರ್ತಿಸಬೇಕು. ದಯೆ ಮತ್ತು ಕರುಣೆಯನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ; ಆದರೆ ಪ್ರವಾದಿಸಲ್ಪಟ್ಟ ಕ್ರೈಸ್ತನು ದೇವರ ವಿರುದ್ಧವಾಗಿ ಮುಕ್ತವಾದ ಕ್ರಾಂತಿಯನ್ನು ಎಬ್ಬಿಸಿದ್ದಲ್ಲಿ ಸಭೆ ಇಂಥಹ ನಡೆತೆಯನ್ನು ಸ್ವೀಕರಿಸಬಾರದು. ಇದು ಎಷ್ಟು ಕಠಿಣ ಮತ್ತು

ಅಪಾಯಕಾರಿಯಾಗಿದೆ ಅಷ್ಟು ಸಭೆ ತನ್ನ ಮೊಂಡ ಸದಸ್ಯರನ್ನು ಶಿಸ್ತಿಗೆ ತರಬೇಕು.

# ಅಳವಡಿಸಿಕೊಳ್ಳುವದು

## ಸ್ಪಷ್ಟವಾದ ಸಮಾಚಾರವನ್ನು ತಿಳಿಸಲು ಕರೆ

ಸೂಚನೆಗಳು ಯಾವಾಗಲೂ ಸ್ಪಷ್ಟವಾಗಿರುವದಿಲ್ಲ. ಮಗುವಿನ ಬಾಟಲಿಯ ಮೇಲೆ ಇರುವ ಚೀಟಿ, "ಮಗು ಬಾಟಲಿಯಲ್ಲಿರುವ ಹಾಲನ್ನು ಸಂಪೂರ್ಣವಾಗಿ ಕುಡಿಯದಿದ್ದಲ್ಲಿ, ಬಾಟಲಿಯ ಮುಚ್ಚಳವನ್ನು ತೆಗೆದು ಹರಿಯುವ ನೀರಿನ ಕೆಳಗೆ ಹಿಡಿಯಬೇಕು. ಮಗು ತಾಜಾ ಹಾಲಿನಿಂದ ವೃದ್ಧಿಯಾಗದಿದ್ದಲ್ಲಿ, ಅದನ್ನು ಕುದಿಸಬೇಕು," ಎಂದು ಬರೆಯಲಾಗಿತ್ತು. ಮೊದಲು ಸಂಭವಿಸಿದ ಸಂಗತಿಯಲ್ಲಿ ಲೇಖಕರು "ಅದು" ಎಂಬ ಸರ್ವನಾಮಪವನ್ನು ಎಚ್ಚರಿಕೆಯಿಂದ ಗಮನಿಸಿದ್ದಲ್ಲಿ, ಹೆಚ್ಚಿನ ಸ್ಪಷ್ಟತೆಯನ್ನು (ಮತ್ತು ಕಡಿಮೆ ಪೇಚಾಟ) ಸಾಧಿಸಬಹುದು.

ಅಪೊಸ್ತಲನಾದ ಪೌಲನಿಗೂ ಸಹ ಕೆಲವೊಮ್ಮೆ ಸ್ಪಷ್ಟತೆಯೊಂದಿಗೆ ಸಮಸ್ಯೆಯಿತ್ತು ಎಂದು ಅನೇಕರು ಮೂರ್ಖತನದಿಂದ ನೆಮ್ಮದಿಯನ್ನು ಪಡೆದುಕೊಳ್ಳಬಹುದು. ಅವನು ಕೊರಿಂಥದ ಕ್ರೈಸ್ತರಿಗೆ ಅನೈತಿಕ ಜನರೊಂದಿಗೆ ಜೊತೆಗೂಡುವದರ ಕುರಿತು ಸೂಚನೆಗಳನ್ನು ನೀಡುವಾಗ ಸಹಜವಾಗಿ ತನ್ನನ್ನು ತಾನು ಸ್ಪಷ್ಟಪಡಿಸಲಿಲ್ಲ (5:9). ಉತ್ತಮವಾದ ಕಾರಣದಿಂದ, ಪೌಲನು ಅವರು ಏನು ಮಾಡಬೇಕೆಂದು ತಾನು ಉದ್ದೇಶಿಸಿದ್ದೇನೆ ಎಂಬುದನ್ನು ಸ್ಪಷ್ಟಪಡಿಸಲು ಕೊರಿಂಥದವರು ತನಗೆ ಅನುಮತಿಸಬೇಕು ಎಂದು ಬಯಸಿದ್ದನು. ಅಪೊಸ್ತಲನು ಅನ್ಯಜನರನ್ನು ಕ್ರೈಸ್ತರು ತಾಳ್ಮೆಯಿಂದ ಇರಬೇಕು, ಎಚ್ಚರಿಕೆಯಿಂದ ಗಮನಿಸಬೇಕು ಎಂದು ಕೇಳಬೇಕಾಗಿದ್ದಲ್ಲಿ, ಮತ್ತು ತಿರುಗಿ ವಿವರಿಸಬೇಕಾಗಿದ್ದಲ್ಲಿ, ಇಂದು ಕ್ರೈಸ್ತರು ಖಂಡಿತವಾಗಿ ಹಿರಿಯರಿಗೆ ಮತ್ತು ಪ್ರಸಂಗಿಗಳು ಉತ್ತಮವಾಗಿ ಮಾಡಲು ಅದೇ ಕೃಪೆಯನ್ನು ನೀಡುತ್ತಿದ್ದರು. ಅನೇಕ ಜನರು ಒಂದಿಲ್ಲಾ ಒಂದು ಸಮಯದಲ್ಲಿ, ಸ್ಪಷ್ಟವಾಗಿ ನಿವೇದಿಸುವಲ್ಲಿ ವಿಫಲರಾಗುತ್ತಾರೆ.

## ಪಾಪದೊಂದಿಗೆ ವ್ಯವಹರಿಸುವದು

ಸಭಿಕರು ಒಂದೇ ವಿಧದ ಶಿಸ್ತನ್ನು ತನ್ನ ಸದಸ್ಯರ ಮೇಲೆ ಪ್ರಯೋಗಿಸದ ಹೊರತು ನಂಬಿಕೆಯ ಸಾಮಾನ್ಯ ಅರಿಕೆಯನ್ನು ಮತ್ತು ಸಾಮಾನ್ಯ ಜೀವಿತದ ವಿಧಾನಕ್ಕೆ ಸಮರ್ಪಿಸಿಕೊಂಡಿರುವವರು ಎಂದು ಜನರು ವ್ಯಾಖ್ಯಾನಿಸುವ ಸಭೆಯಾಗುವದಿಲ್ಲ. ಕೊರಿಂಥದಲ್ಲಿರುವ ಪಾಪದಲ್ಲಿ ಮುಕ್ತವಾಗಿ ಜೀವಿಸುತ್ತಿರುವ ತನ್ನ ಜನರನ್ನು ಕೊರಿಂಥದಲ್ಲಿರುವ ಸಭೆ ಸಹಿಸಿಕೊಂಡಿತ್ತು, ಅವರು ಕ್ರಿಸ್ತನ ದೇಹದ ಪರಿಶುದ್ಧತೆಯೊಂದಿಗೆ ಸಂಧಾನ ಮಾಡಿಕೊಂಡಿದ್ದರು. ಸಭೆಯ ಶಿಸ್ತನ್ನು ಜಾರಿಗೆ ತರುವದು ಕ್ರೈಸ್ತ ಸಮುದಾಯ ಎದುರಿಸುತ್ತಿರುವ ಒಂದು ಕಠಿಣ ಸಮಸ್ಯೆಯಾಗಿದೆ. ಎರಡು ವಿಧದ ಸಭೆಗಳು ಅಸ್ತಿತ್ವದಲ್ಲಿವೆ: (1) ತನ್ನ ಸಹೋದರನನ್ನಾಗಲಿ ಅಥವಾ ಸಹೋದರಿಯನ್ನಾಗಲಿ ಎದುರಿಸದೇ ಇರುವ ಮತ್ತು ಪಶ್ಚಾತ್ತಾಪಪಡಲು ಮತ್ತು ಬದಲಾವಣೆ ಹೊಂದಲು ಒತ್ತಾಯಿಸದೇ ಇರುವವರು (2) ತಮ್ಮಲ್ಲಿ ಒಬ್ಬನನ್ನು ಶಿಸ್ತಿಗೆ ಒಳಪಡಿಸುವಲ್ಲಿ ಅಪರಾಧಕ್ಕೆ ಕಾರಣರಾದವರು. ಸಭೆಯ ಶಿಸ್ತು ಯಾವುದೇ ಗೊಂದಲವಿಲ್ಲದೆ ಸಂಭವಿಸುವದು ವಿರಳ.

*ನಿರಂತರವಾಗಿ ಪರಿಣಾಮಕಾರಿಯಾಗುವಂತೆ ಶಿಸ್ತನು ನಡೆಸಬೇಕು.* ಹಾಜರಾತಿಯಲ್ಲಿ ಪ್ರಾಮಾಣಿಕನಾಗಿರದೇ ಇರುವ ವ್ಯಕ್ತಿಯ ಅನ್ಯೋನ್ಯತೆಯನ್ನು ನಿರಾಕರಿಸುವದು ಸಭೆಗೆ ಯಾವುದೇ ಅರ್ಥವನ್ನು ನೀಡುವದಿಲ್ಲ, ಬದಲಾಗಿ ಅದನ್ನು ಹೆಂಡತಿಯನ್ನು ಹೊಡೆಯುವ ಗಂಡನಿಗೆ ವಿಸ್ತರಿಸಿರಿ. ಕದಿಯುವದು ಲೋಭಕ್ಕಿಂತ ಹೆಚ್ಚಿನ ಪಾಪವಾಗಿದೆಯೋ? ಹರಟೆಯನ್ನು ಸ್ವಾಗತಿಸುವಾಗ ಸುಳ್ಳುಗಾರನನ್ನು ಅನ್ಯೋನ್ಯತೆಯಿಂದ ಹೊರಗಿಡಬಹುದೋ? ಪ್ರತಿಯೊಬ್ಬ ಕ್ರೈಸ್ತರು ಪಾಪಕ್ಕೆ ತಮ್ಮ ಜೀವಿತದಲ್ಲಿ ಎಡೆಮಾಡಿಕೊಡುತ್ತಾರೆ. "ಯಾರೊಬ್ಬರೂ ನೀತಿವಂತರು ಇಲ್ಲ, ಒಬ್ಬನಾದರೂ ಇಲ್ಲ," ಪೌಲನು (ರೋಮಾ 3:10) ರಲ್ಲಿ ಬರೆಯುತ್ತಾನೆ. ಸಭೀಕರು ಮತ್ತು ಕ್ರೈಸ್ತ ನಾಯಕರು ಸಭೆಯ ಶಿಸ್ತಿನ ಸಂಗತಿಯಲ್ಲಿ ಹೋರಾಡುತ್ತಿದ್ದಾರೆ ಎಂಬುದು ಆಶ್ಚರ್ಯವೇನಲ್ಲ!

*ಶಿಸ್ತನ್ನು ಸರಿಯಾದ ಸೂಚನೆಗಳಿಗೆ ಅನುಸಾರವಾಗಿ ನಡೆಸಬೆಕು.* ತಂದೆಯ ಹೆಂಡತಿಯೊಂದಿಗೆ ಜೀವಿಸುತ್ತಿರುವ ವ್ಯಕ್ತಿಗೆ ಪೌಲ ಸೂಚನೆಗಳು ಶಿಸ್ತನ್ನು ತರಲು ಉತ್ತಮವಾದ ಮಾರ್ಗದರ್ಶನವನ್ನು ನೀಡುತ್ತವೆ. ಮೊದಲನೆಯದಾಗಿ, ಮನುಷ್ಯನ ಪಾಪವು ಸಾರ್ವಜನಿಕವಾಗಿ ತಿಳಿದಿತ್ತು. ಎಲ್ಲಾ ಪಾಪಗಳು ಅಷ್ಟೊಂದು ವಿಶಾಲವಾಗಿ ತಿಳಿದಿರುವದಿಲ್ಲ. ಒಬ್ಬ ಸಹೋದರ ಅಥವಾ ಸಹೋದರಿ ಎಲ್ಲರೂ ಕಾಣುವಂತೆ ಪಾಪವನ್ನು ಪ್ರದರ್ಶಿಸುವಾಗ ಸಭೆ ಸಾರ್ವಜನಿಕ ಶಿಸ್ತನ್ನು ಪ್ರಯೋಗಿಸುವದು ಅವಶ್ಯವಾಗಿದೆ. ಸಾರ್ವಜನಿಕ ಪಾಪಕ್ಕೆ ಸಾರ್ವಜನಿಕ ಪ್ರತಿಕ್ರಿಯೆ ಅವಶ್ಯವಾಗಿದೆ.

ಎರಡನೆಯದಾಗಿ, ಮನುಷ್ಯನ ಪಾಪವು ಸಭೆಯ ಗೌರವವನ್ನು ಅ-ಕ್ರೈಸ್ತರ ಎದುರಿನಲ್ಲಿ ದೂಷಿತಗೊಳಿಸುತ್ತದೆ. ಅದು ನಂಬಿಕೆಯ ಬೇಡಿಕೆಗಳನ್ನು ಕ್ಷುಲ್ಲಕವಾಗಿಸುತ್ತದೆ. ನಕಾರಾತ್ಮಕವಾಗಿ ಹೇಳುವಾಗ, ಮನುಷ್ಯನ ಪಾಪವು ಅವನು ಉದ್ರೇಕದಲ್ಲಿರುವಾಗ ತಪ್ಪಾದ-ಆಯ್ಕೆಯ ಪದವಲ್ಲ, ಅದು ಪ್ರಾರ್ಥನೆಮಾಡಲು ಅಥವಾ ಸತ್ಯವೇದವನ್ನು ಅಧ್ಯಯನ ಮಾಡುವಲ್ಲಿ ವಿಫಲರಾಗುವದಲ್ಲ. ಪಾಪ ದೈವೀಕವಲ್ಲದ ಜನರು ಸಹ ಅಪರಾಧವೆಂದು ಪರಿಗಣಿಸುವದಾಗಿದೆ. ಮೂರನೆಯದಾಗಿ, ಮನುಷ್ಯನು ತನ್ನ ನಡೆತೆಯು ಕರ್ತನ ಚಿತ್ತವಿಲ್ಲದೆ ಮರುಸಂಧಾನವಾಗಲು ಸಾಧ್ಯವಿಲ್ಲ ಎಂಬುದು ಮನುಷ್ಯನಿಗೆ ಚೆನ್ನಾಗಿ ತಿಳಿದದೆ. ನಾಲ್ಕನೆಯದಾಗಿ, ಕ್ರೈಸ್ತರನ್ನು ಏಕಾಂತದಲ್ಲಿ ಸಹಜವಾಗಿ ಬೋಧಿಸುತ್ತಾನೆ (ಮತ್ತಾಯ 18:15-17). ಐದನೆಯದಾಗಿ, ಶಿಸ್ತಿನ ಎರಡು ವಿಧದ ಉದ್ದೇಶ ಹೊರಗಿನವರ ಮುಂದೆ ಸಭೆಯ ಗೌರವವನ್ನು ಕಾಯ್ದುಕೊಳ್ಳುವದು (1 ಕೊರಿಂಥ 5:1) ಮತ್ತು ಪಾಪಿಗಳ ಆತ್ಮವನ್ನು ಅವರು ಅಧೀನರಾಗಿರುವ ಪಾಪಗಳಿಂದ ರಕ್ಷಿಸುವದು (5:5). ಶಿಸ್ತಿಗೆ ಒಳಪಡಿಸುವ ಉದ್ದೇಶ ವಯಕ್ತಿಕ ಕೋಪವನ್ನು ವ್ಯಕ್ತಪಡಿಸುವದು, ನಿಖರವಾದ ಪ್ರತಿಕಾರ ಅಥವಾ ಅಪರಾಧಿಯನ್ನು ಶಿಕ್ಷಿಸುವದಲ್ಲ.

---

## ಟಿಪ್ಪಣಿಗಳು

[1]Ben Witherington III, *Conflict and Community in Corinth: A Socio-Rhetorical Commentary on 1 and 2 Corinthians* (Grand Rapids, Mich.: Wm. B. Eerdmans Publishing Co., 1995), 156. [2]Friedrich Hauck and Siegfried Schulz, "πόρνη, πόρνος, πορνεία, πορνεύω,

ἐκπορνεύω," in *Theological Dictionary of the New Testament*, ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1971), 6:587. [3]Francis Schaeffer, *The God Who Is There* (London: Hodder and Stoughton, 1968), 155. [4]ಅಪ್ಯೂಲಿಯಸ್ನ ಕಥೆ ಮೆಟಾಮಾರ್ಫೋಸಿಸ್ (ಇದನ್ನು ಗೋಲ್ಡನ್ ಆಸ್ ಎಂದು ಕರೆಯಲಾಗುತ್ತದೆ, ಲ್ಯಾಟಿನ್ ಭಾಷೆಯಲ್ಲಿ ಕೇವಲ ಪ್ರಾಚೀನ ರೋಮನ್ ಕಾದಂಬರಿ ಸಂಪೂರ್ಣವಾಗಿ ಬದುಕಲು) ಒಂದು ಉದಾಹರಣೆಯಾಗಿದೆ. ಅಪ್ಯೂಲಿಯಸ್ ಉತ್ತರ ಆಫ್ರಿಕಾದ ಕುಟುಂಬದ ಶ್ರೀಮಂತ ವ್ಯಕ್ತಿಯಾಗಿದ್ದಳು. ಅವರು ಲ್ಯಾಟಿನ್ ಭಾಷೆಯಲ್ಲಿ ಬರೆದರು ಆದರೆ ಎರಡನೆಯ ಶತಮಾನದ ಗ್ರೀಕ್ ಸಂಯೋಜನೆಯು ಹಿಸ್ಟೋರಿಯನ್ನು ನೀಡಿದರು.